ವಿಜಯಪುರ | ಸಂಪುಟ 04 | ಸಂಚಿಕೆ 103 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಜೂನ್ 11, 2026

"ಕಳೆದ ಹತ್ತು ವರ್ಷಗಳಲ್ಲಿ ಮೋದಿ ಅವರೊಂದಿಗಿನ ನನ್ನ ಸಂಬಂಧವು ಕೇವಲ ಒಂದು ರಾಜ್ಯಸಭೆ ಸ್ಥಾನಕ್ಕಾಗಿ ಬೆಳೆದದ್ದಲ್ಲ. ಅದು ನಮ್ಮಿಬ್ಬರ ನಡುವಿನ ವೈಯಕ್ತಿಕ ಬಾಂಧವ್ಯವಾಗಿದೆ. ನಾನು ರಾಜ್ಯಸಭೆಯ ಸದಸ್ಯನಾಗಿರದಿದ್ದರೂ ಆ ಸಂಬಂಧ ಮುಂದುವರಿಯುತ್ತದೆ"



■ ಎಚ್.ಡಿ.ದೇವೇಗೌಡ
ಮಾದಿ ಪ್ರಧಾನ ಮಂತ್ರಿ

## ಸಕಾಲಕ್ಕೆ ವಿವಿಧ ಪ್ರಮಾಣ ಪತ್ರಗಳನ್ನು ವಿತರಿಸಿ : ಡಿಸಿ ಡಾ.ಆನಂದ ಕೆ



■ ಉದಯರಶ್ಮಿ ದಿನಪತ್ರಿಕೆ

**ತಿಕೋಟ-ಬಬಲೇಶ್ವರ ತಾಲೂಕಿನ ವಿವಿಧ ಕಚೇ-ರಿಗಳಿಗೆ ಜಿಲ್ಲಾಧಿಕಾರಿ ಭೇಟಿ-ಪರಿಶೀಲನೆ**

ವಿಜಯಪುರ: ವಿವಿಧ ಪ್ರಮಾಣ ಪತ್ರಗಳನ್ನು ಸಾರ್ವಜನಿಕರಿಗೆ ಸಕಾಲಕ್ಕೆ ವಿತರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ಬಬಲೇಶ್ವರ ತಾಲೂಕಿನ ಮಮದಾಪುರ ನಾಡಕಚೇರಿಯ ಅಟಲ್ ಜನಸ್ನೇಹಿ ಕೇಂದ್ರದಲ್ಲಿ ನೀಡಲಾಗುವ ವಿವಿಧ ಪ್ರಮಾಣ ಪತ್ರಗಳ ಹಾಗೂ ಪಿಂಚಣಿ ಯೋಜನೆಗಳನ್ನು ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

ಅಟಲ್ ಜನಸ್ನೇಹಿ ಕೇಂದ್ರದಲ್ಲಿ ನೀಡಲಾಗುವ ವಿವಿಧ ಪ್ರಮಾಣ ಪತ್ರಗಳನ್ನು ಸಾರ್ವಜನಿಕ-ರಿಗೆ ಸಕಾಲಕ್ಕೆ ವಿತರಿಸಬೇಕು ಎಂದು ಸೂಚಿಸಿದ ಅವರು, ಬಳಿಕ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು.

ಇದಕ್ಕೂ ಮೊದಲು ಗ್ರಾಮದಲ್ಲಿ ಅರಣ್ಯ ಇಲಾಖೆಯವರು ಆಯೋಜಿಸಿದ್ದ ಹಸರೀಕರಣ ಮತ್ತು ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಸಿ ನೆಟ್ಟು, ಸಸಿಗೆ ನೀರುಣಿಸಿದರು.

ನಂತರ ಮಮದಾಪುರ ದೊಡ್ಡ ಕೆರೆಗೆ ಬೇಟಿ ನೀಡಿ ಕೆರೆ ತುಂಬಿಸುವ ಯೋಜನೆ ಬಗ್ಗೆ ಪರಿಶೀಲಿಸಿ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಬಳಿಕ ಬಬಲೇಶ್ವರ ಪಟ್ಟಣದ ಸರಕಾರಿ ಐ.ಟಿ.ಐ ಕಾಲೇಜಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ-2026ರ ಕಾರ್ಯದ ಕುರಿತು ಮತಗಟ್ಟೆ ಅಧಿಕಾರಿಗಳು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ-2026ರ ಕುರಿತು ಸೂಕ್ತ ಸಲಹೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಕಂದಾಯ ಇಲಾಖೆ, ಅರಣ್ಯ ಇಲಾಖೆ ಅಧಿಕಾರಿಗಳು ಸೇರಿದಂತೆ ಸಾರ್ವಜನಿಕರು ಪಾಲ್ಗೊಂಡಿದ್ದರು.

# ನನಗೆ ರಾಜ್ಯಸಭಾ ಸದಸ್ಯನಾಗಬೇಕೆಂಬ ವ್ಯಾಮೋಹವಿಲ್ಲ : ಎಚ್ಡಿಡಿ

## ರಾಜ್ಯಸಭಾ ಟಿಕೆಟ್ ಕುರಿತು ಸ್ಪಷ್ಟನೆ ನೀಡಿದ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ | ವಿರೋಧಿಗಳಿಗೆ ಖಡಕ್ ಸಂದೇಶ ರವಾನೆ





"ರಾಜ್ಯಸಭೆ ಟಿಕೆಟ್‌ಗೆ ಹೆಚ್.ಡಿ. ದೇವೇಗೌಡರು ಅರ್ಜಿಯೇ ಹಾಕಿರಲಿಲ್ಲ. ದೇವೇಗೌಡರ ಬಗ್ಗೆ ಕಾಂಗ್ರೆಸ್ಸಿಗರಿಗೆ ಈಗ ಅನುಕಂಪ ಬಂದಿದೆ. ಬಿಜೆಪಿ-ಜೆಡಿಎಸ್ ಮೈತ್ರಿಯಿಂದ ಕಾಂಗ್ರೆಸ್‌ಗೆ ಭಯ ಶುರುವಾಗಿದ್ದು, ನಮ್ಮ ನಡುವೆ ಬಿರುಕು ತರಲು ಕಾಂಗ್ರೆಸ್ ಪ್ರಯತ್ನ ಮಾಡುತ್ತಿದೆ. ದೇವೇಗೌಡರು ಅಧಿಕಾರಕ್ಕಾಗಿ ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದಿದ್ದರು."

■ ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವರು

ಬೆಂಗಳೂರು: ಮಾಜಿ ಪ್ರಧಾನ ಮಂತ್ರಿ ಹೆಚ್ ಡಿ ದೇವೇಗೌಡರಿಗೆ ಎನ್ ಡಿಎಯಿಂದ ರಾಜ್ಯಸಭಾ ಟಿಕೆಟ್ ಕೈತಪ್ಪಿದ್ದು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ಬುಧವಾರ ಬೆಂಗಳೂರಿನ ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿರುವ ಹೆಚ್‌ಡಿ ದೇವೇಗೌಡರು, 'ನನಗೆ ರಾಜ್ಯಸಭಾ ಸದಸ್ಯನಾಗಬೇಕು ಎಂಬ ಯಾವುದೇ ವ್ಯಾಮೋಹವಿಲ್ಲ. ನನ್ನ ರಾಜಕೀಯ ಜೀವನದ ಎಪ್ಪತ್ತು ವರ್ಷಗಳ ಸುದೀರ್ಘ ಪಯಣದಲ್ಲಿ ಅಧಿಕಾರಕ್ಕಿಂತ ಜನಸೇವೆಯೇ ಮುಖ್ಯವಾಗಿತ್ತು' ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಇದೇ ಸಂದರ್ಭದಲ್ಲಿ ವಿರೋಧಿಗಳಿಗೆ ಖಡಕ್ ಸಂದೇಶ ರವಾನಿಸಿದ ದೇವೇಗೌಡರು, ನಾನು ಸುಮ್ಮನೆ ಕೂರಲ್ಲ, ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ರಾಜ್ಯ ಮತ್ತು ದೇಶದ ವಿಚಾರವನ್ನು ಯಾರ ಹಂಗಿಲ್ಲದೆ ಮಾತಾಡ್ತೇನೆ ಎಂದು ಹೇಳಿದರು.

ಏಳು ದಶಕಗಳ ರಾಜಕೀಯ ಪಯಣ

ತಮ್ಮ ರಾಜಕೀಯ ಜೀವನದ ಆರಂಭದ ದಿನಗಳನ್ನು ಸ್ಮರಿಸಿದ ದೇವೇಗೌಡರು, 'ನಾನು ರಾಜಕಾರಣಕ್ಕೆ ಬಂದು ಎಷ್ಟು ವರ್ಷವಾಯಿತು ಎಂದು ಒಮ್ಮೆ ಯೋಚಿಸಿ. 1954-55 ರಿಂದಲೇ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಅಂದು ಕೇವಲ ಗುತ್ತಿಗೆ ಕೆಲಸ ಮಾಡುತ್ತಿದ್ದ ನಾನು, ಅದರ ಜೊತೆಜೊತೆಗೆ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ರಾಜಕೀಯಕ್ಕೆ ಬಂದವನು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಜನರ ಮಧ್ಯೆಯೇ ಇದ್ದೇನೆ. ಹಾಗಾಗಿ, ಇಂದು ಒಂದು ಸ್ಥಾನಕ್ಕಾಗಿ ನಾನು ಹಾತೊರೆಯುವ ಅಗತ್ಯವಿಲ್ಲ ಎಂದರು.

ಬಾಕ್ಸ್

ಅಪಮಾನದ ಪ್ರಶ್ನೆಯೇ ಇಲ್ಲ :ಎಚ್ಡಿಡಿ

ರಾಜ್ಯಸಭಾ ಟಿಕೆಟ್ ಕೈತಪ್ಪಿದ್ದಕ್ಕೆ ದೇವೇಗೌಡರಿಗೆ ಅಪಮಾನ ಮಾಡಲಾಗಿದೆ ಎಂಬ ಅವರ ಹಿತೈಷಿಗಳ ಹಾಗೂ ಬೆಂಬಲಿಗರ ಮಾತಿಗೆ ಪ್ರತಿಕ್ರಿಯಿಸಿದ ದೇವೇಗೌಡರು, ನನ್ನ ಸ್ನೇಹಿತರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದ-'ರೆ, ನನ್ನ ಹೆಸರು ಪರಿಗಣನೆಗೆ ಬರುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾಗಿದ್ದು ಬಿಟ್ಟರೆ, ನಾನು ಆ ಬಗ್ಗೆ ಎಲ್ಲಿಯೂ ಬೇಡಿಕೆ ಇಟ್ಟಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ನನಗೆ ಸ್ಪರ್ಧಿಸುವ ಆಸಕ್ತಿ ಇದ್ದಿದ್ದರೆ, ಮೇ 26ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕಾಗಿ ದೆಹಲಿಗೆ ಹೋದಾಗ ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಈ ವಿಷಯವನ್ನು ಚರ್ಚಿಸುತ್ತಿದ್ದೆ. ಆದರೆ ನಾನು ಯಾರೊಂದಿಗೂ ಈ ಬಗ್ಗೆ ಮಾತುಕತೆ ನಡೆಸಲಿಲ್ಲ. ಕಾರ್ಯಕ್ರಮ ಮುಗಿದ ಬಳಿಕ ಬೆಂಗಳೂರಿಗೆ ಹಿಂದಿರುಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್ ಟೀಕೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ಈ ವಿಷಯದಲ್ಲಿ ನನಗೆ ಆಸಕ್ತಿ ಇಲ್ಲ. ಇದು ಪಕ್ಷದೊಳಗೆ ಚರ್ಚೆಯಾದ ವಿಚಾರ. ನಮ್ಮ ಬಳಿ ವಿಧಾನಸಭೆಯಲ್ಲಿ 18 ಸದಸ್ಯರಿದ್ದಾರೆ. ಈ ಸಂಖ್ಯೆಯಿಂದ ನಾವು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ. ಇದಕ್ಕಿಂತ ಹೆಚ್ಚು ಪ್ರತಿಕ್ರಿಯೆ ನೀಡಲು ನಾನು ಬಯಸುವುದಿಲ್ಲ ಎಂದು ಹೇಳಿದರು.

## ಕಾಲುವೆ ದಡದಲ್ಲಿ ಉಳಿದ ಹೂಳು; ಸಂಚಾರಿಗಳ ಗೋಳು

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಎಸ್ ಎಮ್ ಇಟ್ಟಿ



ಜಮಖಂಡಿ: ತಾಲೂಕಿನ ಹೂನ್ನೂರ, ಕಡಪಟ್ಟಿ ಹಾಗೂ ಜಮಖಂಡಿ ನಗರದ ಹೊರ ವಲಯದಲ್ಲಿ ಹಾದು ಹೋಗಿರುವ ಜಿ ಎಲ್ ಬಿ ಸಿ ಕೆನಾಲ್ ದಲ್ಲಿನ ಹೂಳು ತೆಗೆದರೂ ಕೂಡಾ ಹಲವು ಕಡೆ ಹೂಳು ಕೆನಾಲ್ ದಂಡೆಯಲ್ಲಿ ಉಳಿಸಿದ್ದು ಇದು ಮತ್ತೆ ಕೆನಾಲ್ ಪಾಲಾಗುವ ಬಗ್ಗೆ ಆತಂಕ ವ್ಯಕ್ತವಾಗಿದೆ.

"ಅನೇಕ ಕಡೆ ಕೆನಾಲ್ ದಂಡೆಯ ಮೇಲೆ ಹೂಳನ್ನು ಹಾಗೆ ಬಿಡಲಾಗಿದೆ. ಇದರಿಂದ ಸಾರ್ವಜನಿಕರು ಕೆನಾಲ್ ರಸ್ತೆಯ ಮೂಲಕ ಸಂಚರಿಸುವುದು ಕಷ್ಟವಾಗಿದೆ. ತಕ್ಷಣವೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹೂಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು."

■ ಸಿದ್ಧಲಿಂಗ ಹಿರೇಮಠ
ದ್ವಿಚಕ್ರ ವಾಹನ ಸವಾರ.

ಮತ್ತೆ ಹೂಳು ಕಾಲುವೆ ಸೇರಿದರೆ ಇದ-ರಿಂದ ಹಲವು ಕಡೆ ನೀರು ರಸ್ತೆಯ ಮೇಲೆ ಬರುತ್ತದೆ ಇದರಿಂದ ಕಾಲುವೆಯ ಅಕ್ಕ ಪಕ್ಕ ಸಂಚರಿಸುವ ರೈತರಿಗೆ, ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಹಲವು ಕಡೆ ಹೂಳು ಹಾಗೂ ಮುಳ್ಳಿನ ಗಿಡಗಳನ್ನು ಕಡಿದು ಕಾಲುವೆ ಪಕ್ಕದಲ್ಲಿ ಹಾಗೆ ಬಿಡಲಾಗಿದೆ, ಮಳೆಗಾಲದಲ್ಲಿ ಗಾಳಿಯ ರಭಸಕ್ಕೆ ಮುಳ್ಳಿನ ಕಂಠಿಗಳು ರಸ್ತೆಯಲ್ಲಿ ಬಿದ್ದರೆ ವಾಹನ ಸವಾರರ ಗಾಡಿಗಳು ಪಂಚರ್ ಆಗುವ ಭೀತಿ ಆಗುತ್ತದೆ, ಕಾಲುವೆಯ ದಂಡೆಯ ಮೇಲೆ ಬಿಡಲಾದ ಹೂಳಿನಿಂದ ರಸ್ತೆಯು ಕೆಸರುಮಯವಾಗುತ್ತದೆ, ಹಾಗೆಯೇ ಕಾಲುವೆಯ ಪಾಲಾಗುತ್ತದೆ ಎಂದು ಸ್ಥಳೀಯ ನಿವಾಸಿ ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಹೂಳನ್ನು ವಿಲೇವಾರಿ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

"ಹಲವು ಕಡೆ ಕೆನಾಲನ ಅಕ್ಕ ಪಕ್ಕದಲ್ಲಿರುವ ಗಿಡ ಗಂಟೆಗಳನ್ನು ಹಾಗೆ ಬಿಡಲಾಗಿದೆ ಅವುಗಳನ್ನು ಕೂಡಾ ತೆರವುಗೊಳಿಸಬೇಕು."

ಹೆಸರು ಹೇಳಲಿಚ್ಛಿಸದ ಸ್ಥಳಿಯ ನಿವಾಸಿ.

## ತಾಯಿ ಹಾಲು ಬ್ಯಾಂಕ್ ಸೌಲಭ್ಯ ಪಡೆದುಕೊಳ್ಳಿ : ಡಾ. ಮಾಸ್ತಿಹೊಳಿ

### ವಿಜಯಪುರದಲ್ಲಿ ಧಾತ್ರಿ ಸಮಗ್ರ ಹಾಲುಣಿಸುವಿಕೆಯ ಮಹತ್ವದ ಕಾರ್ಯಾಗಾರ ಉದ್ಘಾಟನೆ

■ ಉದಯರಶ್ಮಿ ದಿನಪತ್ರಿಕೆ






ವಿಜಯಪುರ: ಅವಧಿಗೂ ಮುನ್ನ ಶಿಶು ಜನನದಿಂದ ಅಮೃತಕ್ಕೆ ಸಮಾನವಾದ ಎದೆಹಾಲು ಲಭ್ಯವಾಗದಿದ್ದಲ್ಲಿ ಜಿಲ್ಲಾಸ್ಪತ್ರೆ ಆವರಣದಲ್ಲಿರುವ ಹಾಲಿನ ಬ್ಯಾಂಕ್ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಜಿಲ್ಲಾಸ್ಪತ್ರೆ ಶಸ್ತ್ರ ಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾಸ್ಪತ್ರೆ, ಸಮಗ್ರ ಹಾಲುಣಿಸುವಿಕೆಯ ನಿರ್ವಹಣೆ ಕೇಂದ್ರ ಮತ್ತು ತಾಯಂದಿರ ಹಾಲಿನ ಬ್ಯಾಂಕ್ ಹಾಗೂ ಸುಶೇನಾ ಹೆಲ್ತ್ ಫೌಂಡೇಶನ್ ಹೈದ್ರಾಬಾದ ಇವರ ಸಹಯೋಗದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಆರೋಗ್ಯ ಸೌಧ ಸಭಾ ಭವನದಲ್ಲಿ ಧಾತ್ರಿ ಸಮಗ್ರ ಹಾಲುಣಿಸುವಿಕೆಯ ಮಹತ್ವದ ಬಗ್ಗೆ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾ-ರಿಗಳು ಹಾಗೂ ನಗರ ಆರೋಗ್ಯ ಕೇಂದ್ರದ ಆಶಾ ಕಾರ್ಯಕರ್ತೆಯರಿಗೆ ಬುಧವಾರ ಹಮ್ಮಿಕೊಂಡಿದ್ದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆಗ ತಾನೇ ಜನಿಸಿದ ಶಿಶುವಿನ ತಾಯಿಯ ಎದೆಯಲ್ಲಿ ಹಾಲು ಉತ್ಪತ್ತಿಯಾಗದೇ ಇರುವ, ಅಗತ್ಯ ಇರುವ ಶಿಶುವಿಗೆ, ತಾಯಿ ಮಗುವಿಗೆ ಎದೆಹಾಲು ಉಣಿಸಲು ಸಾಧ್ಯವಾಗದ ಸಂದರ್ಭದಲ್ಲಿ ವಿಜಯಪುರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ತಾಯಿಯ ಹಾಲಿನ ಬ್ಯಾಂಕ ಸೇವೆ ಪಡೆದುಕೊಳ್ಳಬೇಕು ಎಂದರು.

ತಾಯಿಯ ಎದೆಹಾಲನ್ನು ಅಮೃತ ಎಂದೇ ಹೇಳಲಾಗುತ್ತದೆ. ತಾಯಿ-ಮಗುವಿನ ಬಾಂಧವ್ಯವನ್ನು ಕಾಂಗರೂ ಪರಿಕಲ್ಪನೆ ಎಂದೂ ಕರೆಯಲಾಗುತ್ತದೆ. ತಾಯಿ ಹಾಲನ್ನು ಉಣಿಸುವ ಸಮಯದ ಈ ಬಾಂಧವ್ಯ ಮಗುವಿನ ಜೀವನ ಪೂರ್ತಿ ಸಂಬಂಧವನ್ನು ಕಾಪಾಡುವಲ್ಲಿ ಪೂರಕವಾಗಿರುತ್ತದೆ. ಮಗುವು ಜನಿಸಿದ ತಕ್ಷಣ ಉತ್ಪತ್ತಿಯಾಗುವ ಕೊಲಸ್ಟಮ್ ಮಗುವಿಗೆ ಜೀವನ ಪೂರ್ತಿ ಆಂತರಿಕ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ ಎಂದರು.

ಹೈದರಾಬಾದ್ ನ ಹೆಲ್ತ್ ಫೌಂಡೇಶನ್ ಹೈದರಾಬಾದ್ ಸ್ಥಾಪಕ ಮತ್ತು ಕಾರ್ಯದರ್ಶಿ ಡಾ. ಸಂತೋಷ ಜಿ ಸುಶೇನಾ ಮಾತನಾಡಿ, ಸ್ವಯಂ ಪ್ರೇರಿತ ದಾನಿಗಳು, ಮಗುವನ್ನು ಕಳೆದುಕೊಂಡ ತಾಯಂದಿರು, ಕೆಲಸಕ್ಕೆ ಹೋಗುವ ತಾಯಂದಿರು ಹಾಲನ್ನು ದಾನ ಮಾಡಬಹುದಾಗಿದೆ. ನವಜಾತ ಶಿಶುಗಳಲ್ಲಿ ಜೀರ್ಣಾಂಗವ್ಯೂಹದ ನ್ಯೂನ್ಯತೆಗಳು ಹಾಗೂ ಕಾಯಿಲೆಗಳು ಇದ್ದಲ್ಲಿ ಅವಧಿಗೆ ಮುನ್ನ ಜನಿಸಿದ ಮಕ್ಕಳಲ್ಲಿ (1500ಜಿಎಂ) ಕ್ಕಿಂತ ತೂಕ ಕಡಿಮೆಯಿರುವ ಶಿಶುಗಳು) ತಾಯಿಂದಿರ ಹಾಲಿನ ಬ್ಯಾಂಕಿನ ಉಪಯೋಗ ಪಡೆಯಬಹುದಾಗಿದೆ ಎಂದರು.

ಜಿಲ್ಲಾ ರೋಗವಾಹಕ ಅಶ್ರೀತ ನಿಯಂತ್ರಣಾ ಅಧಿಕಾರಿ ಡಾ. ಜಾನ್ ಕಟವಟೆ ಮಾತನಾಡಿ, ಅನಾರೋಗ್ಯ ಅಥವಾ ಸಾಕಷ್ಟು ಪ್ರಮಾಣ ಹಾಲು ಉತ್ಪಾದನೆ ಸಾಧ್ಯವಾಗದ ಸಮಯದಲ್ಲಿ ಸುಮಾರು ಶೇ. 20 ರಷ್ಟು ನವಜಾತ ಶಿಶುಗಳಿಗೆ ದಾನಿ ತಾಯಿಯ ಹಾಲು ಅಗತ್ಯವಿದೆ. ಹೆರಿಗೆ ಆಸ್ಪತ್ರೆಯಲ್ಲಿ 900 ತಾಯಂದಿರಲ್ಲಿ 150 ತಾಯಂದಿರನ್ನು ಹಾಲು ದಾನ ಮಾಡಲು ಮನವೊಲಿಸುವುದು ಸಹ ಬ್ಯಾಂಕಿನ ಆರಂಭಿಕ ಗುರಿಗಳನ್ನು ಪೂರೈಸುತ್ತದೆ ಎಂದರು.

ತರಬೇತಿ ಕಾರ್ಯಾಗಾರದಲ್ಲಿ ಆರೋಗ್ಯ ವ್ಯವಸ್ಥೆಗಳ ಬಲವರ್ಧನೆಯ ನಿರ್ದೇಶಕ ಡಾ. ಮುಜಾಮದಾರ, ಚಕ್ರವರ್ತಿ, ಡಾ.ಕಾಶಿನಾಥ ಲಕ್ಕರಾಜ, ಡಾ.ಸುಧೀರ ಚವ್ಹಾಣ, ನವಜಾತ ಶಿಶುವೈದ್ಯಶಾಸ್ತ್ರ ವಿಭಾಗ ಡಾ. ಅನುಷಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸುರೇಶ ಹೊಸಮನಿ, ನವಜಾತ ಚಿಕ್ಕ ಮಕ್ಕಳ ತಜ್ಞರು, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಂಕರ ಚಲವಾದಿ ಮತ್ತು ರೇಖಾ ದಶವಂತ, ಎನ್. ಆರ್. ಬಾಗವಾನ ತಾಲೂಕಾ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ನಗರ ಆರೋಗ್ಯ ಕೇಂದ್ರದ ಆಶಾ ಕಾರ್ಯಕರ್ತೆಯರು, ಧಾತ್ರಿ ತಾಯಿಯ ಹಾಲಿನ ಬ್ಯಾಂಕ್ ಮತ್ತು ಸಿಎಲ್ ಎಂಸಿ ತಂಡಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಇದ್ದರು.

"ವಿಜಯಪುರ ಸರ್ಕಾರಿ ಆಸ್ಪತ್ರೆಯು ಉತ್ತರ ಕರ್ನಾಟಕದಲ್ಲಿ ಮೊದಲ ಬಾರಿಗೆ ಎದೆಹಾಲು ಬ್ಯಾಂಕ್ ಸ್ಥಾಪಿಸಿದೆ. ಇದು ವಾರ್ಷಿಕವಾಗಿ 2 ಸಾವಿರ ನವಜಾತ ಶಿಶುಗಳಿಗೆ ಸೇವೆ ಸಲ್ಲಿಸಲಿದೆ. ದಾನಿಗಳಿಂದ ತಾಯಿಯ ಹಾಲನ್ನು ಸರಿಯಾದ ರೀತಿಯಲ್ಲಿ ಪಡೆದು ಶೇಖರಿಸಲಾಗುತ್ತದೆ. ಹಾಲನ್ನು ಪಡೆಯುವ ಮುನ್ನ ತಾಯಿಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ಅಲ್ಲದೆ ತಾಯಿಗೆ ಅವಶ್ಯಕವಿರುವ ರಕ್ತ ಪರೀಕ್ಷೆಗಳನ್ನು 3. '2', '', 5, -1, 2, ಸೋಂಕುಗಳು ದಾನಿಯಾದ ತಾಯಿಗೆ ಇಲ್ಲದಿರುವುದನ್ನು ಖಚಿತ ಪಡಿಸಿಕೊಳ್ಳಬೇಕಾಗುತ್ತದೆ."

■ ಡಾ.ಶಿವಾನಂದ ಮಾಸ್ತಿಹೊಳಿ
ವಿಜಯಪುರ ಜಿಲ್ಲಾ ಶಸ್ತ್ರಚಿಕಿತ್ಸಕರು

## ಸಾಲಬಾಧೆಯಿಂದ ರೈತ ಆತ್ಮಹತ್ಯೆ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ತಾಲೂಕಿನ ಫೀರಾಪೂರ ಗ್ರಾಮದ ರೈತ ದೇವಪ್ಪ ರಾಯಪ್ಪ ಹಾಲನ್ನವರ 37 ಸಾಲದ ಬಾಧೆಯಿಂದ ಬುಧುವಾರರಂದು ಮುಂಜಾನೆ 9 ಗಂಟೆಯ ಸುಮಾ-ರಿಗೆ ಊರ ಮುಂದಿನ ತನ್ನ ಜಮೀನಿನಲ್ಲಿಯ ಗಿಡಕ್ಕೆ ನೇಣು ಬೀಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಜಮೀನಿನ ಸಾಗುವಳಿಗಾಗಿ ಹಾಗೂ ವಯಸ್ಸಾದ ನಮ್ಮ ಅತ್ತೆಯ ಚಿಕಿತ್ಸೆಯ ಸಲುವಾಗಿ ಕೊಡಗಾನೂರ ಎಸ್.ಬಿ.ಐ ಬ್ಯಾಂಕಿನಲ್ಲಿ 26000/- ರೂ. ಬೆಳೆಸಾಲ ಹಾಗೂ ಊರಲ್ಲಿ ಕೈಗಡ ಅಂತಾ 5 ಲಕ್ಷ ರೂ ಸಾಲ ಮಾಡಿಕೊಂಡಿದ್ದು ಕಳೆದ ಎರಡು ಮೂರು ವರ್ಷದಿಂದ ಸರಿಯಾಗಿ ಬೆಳೆ ಬಾರದ ಕಾರಣ ಮಾಡಿದ ಸಾಲವನ್ನ ತಿರಿಸಲಾಗದೆ ಸಾಲಕ್ಕೆ ಮನನೊಂದು ಊರ ಮುಂದಿನ ತಮ್ಮದೇ ಹೊಲದಲ್ಲಿನ ಶಂಕೇಶ್ವರ ಗಿಡಕ್ಕೆ ಲುಂಗಿಯಿಂದಾ ನೇಣುಬೀಗಿದಿಕೊಂಡು ಆತ್ಮಹತ್ಯೆ ಮಾಡಿದ್ದಾನೆಂದು ಮೃತ ದೇವಪ್ಪನ ಪತ್ನಿ ಸುಶಿಲಮ್ಮ ಹಾಲನ್ನವರ ತಾಳಿಕೋಟೆ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

## ಜೂ.12 ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹೆಸ್ಕಾಂ ವಿಜಯಪುರದ ವ್ಯಾಪ್ತಿಯಲ್ಲಿ ಬರುವ 11 ಕೆ.ವ್ಹಿ ಓಲ್ಡ್ ಇಂಡಸ್ಟ್ರೀಯಲ್ ಫೀಡರ್ ಮೇಲೆ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವುದ-ರಿಂದ ಈ ಫೀಡರ್‌ನ ಮೇಲೆ ಬರುವ ಕೆ.ಐ.ಎ.ಡಿ.ಬಿ, ಪಾನಿ ನಗರ, ಶಿವ ಶಕ್ತಿ ನಗರ, ಪರಮೇಶ್ವರ ನಗರ, ಆದಿಲ್ ಶಾಹಿ ನಗರ, ಬೋವಿ ನಗರ, ಗಾಂಧಿ ಆಯಿಲ್ ಮಿಲ್, ಕೃಷ್ಣ ನಗರ, ವಿನಾಯಕ ಹೋಟೇಲ್, ವ್ಹಿ.ಆರ್.ಎಲ್ ಆಫೀಸ್, ಚಾಂದಿನಿ ಹಾಲ್, ಶ್ಯಾಪೇಟಿ, ಬಿಲ್ಲಾಲ್ ನಗರ, ಎ.ಪಿ.ಎಮ್.ಸಿ ಲೇಮನ್ ಮಾರ್ಕೆಟ್ ಹಾಗೂ ಸ್ಟೇಷನ ಬ್ಯಾಕ್ ರೋಡ್ ಪ್ರದೇಶಗಳಲ್ಲಿ ಜೂ.12ರ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಹೆಸ್ಕಾಂದೊಂದಿಗೆ ಸಹಕ-ರಿಸಬೇಕೆಂದು ಹೆಸ್ಕಾಂನ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಸ್ತೆಗಳ ಸುಧಾರಣೆಗೆ ಪ್ರಾಮಾಣಿಕ ಪ್ರಯತ್ನ :ಶಾಸಕ ಮನಗೂಳಿ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ ಜನತೆಗೆ ಮೂಲಭೂತ ಸೌಕರ್ಯಗಳನ್ನು ಪ್ರಾಮಾಣಿಕವಾಗಿ ಒದಗಿಸುವ ಕಾರ್ಯದಲ್ಲಿ ಕಾರ್ಯಪ್ರವೃತ್ತನಾಗಿದ್ದೇನೆ. ಜೊತೆಗೆ ರೂ.25ಕೋಟಿ ವೆಚ್ಚದ 43 ರಸ್ತೆ ಕಾಮಗಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದು ಸಹ ಮಂಜೂರು ಹಂತದಲ್ಲಿದೆ. ಇನ್ನು ಒಂದೆ ತಿಂಗಳಲ್ಲಿ ಮಂಜೂರು ಮಾಡಿಸಿ ನಗರದಲ್ಲಿ ಹದಗೆಟ್ಟಿರುವ ರಸ್ತೆಗಳನ್ನು ಸರಿಪಡಿಸುವ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಬಸವ ಮಂಟಪದ ಬಳಿ ನಗರಸಭೆ ವತಿಯಿಂದ 2025–26ನೆಯ ಸಾಲಿನ ಮುಖ್ಯಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ ಅಡಿಯಲ್ಲಿ ರೂ.30ಲಕ್ಷದ ಅನುದಾನದ ರಸ್ತೆ ಅಭಿವೃದ್ಧಿ ಪಡಿಸುವ ಭೂಮಿಪೂಜೆಯನ್ನು ನೇರವೇರಿಸಿ ಮಾತನಾಡಿದ ಅವರು, ಸಿಂದಗಿ ನಗರಕ್ಕೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 34 ರಸ್ತೆಗಳು ಮಂಜೂರಾಗಿವೆ. 34ರಲ್ಲಿ ಮೊದಲಿಗೆ 21ನೇ ವಾರ್ಡನಿಂದಲೇ ಪ್ರಾರಂಭೋತ್ಸವ ಮಾಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ರವಿ ಶಿರಗುಪ್ಪಿ, ಅಜರ್ ನಾಟೀಕಾರ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಸಾಯಬಣ್ಣ ಪುರದಾಳ, ಅಂಬರೀಶ ಚೌಗಲೆ, ಸುನಂದಾ ಯಂಪುರೆ, ಹಾಂಸಿಪೀರ ಆಳಂದ, ನೂರಅಹ್ಮದ ಅತ್ತಾರ, ಶಾಂತೂ ರಾಣಾಗೋಳ, ಜಯಶ್ರೀ ಹದನೂರ, ಶಶಿಕಲಾ ಅಂಗಡಿ, ರವಿ ನಾವಿ, ಎ.ಎ.ಮುಲ್ಲಾ ಸೇರಿದಂತೆ ಇಲಾಖೆಯ ಸಿಬ್ಬಂದಿಗಳು, ಪಕ್ಷದ ಕಾರ್ಯಕರ್ತರು ಹಾಗೂ ನಿವಾಸಿಗಳು ಇದ್ದರು.

# ಸುಲ್ತಾನಪುರ ರಸ್ತೆಯಲ್ಲಿ ಜೂಜಾಟ:17 ಜನರ ಬಂಧನ

ಕಲಬುರಗಿ:ನಗರದ ಸುಲ್ತಾನಪುರ ರಸ್ತೆಯ ರೈಲ್ವೆ ಬ್ರಿಡ್ಜ್ ಹತ್ತಿರವಿರುವ ಇಟ್ಟಿಗೆ ಭಟ್ಟಿ ಹತ್ತಿರದ ಬೇವಿನ ಮರದ ಕೆಳಗೆ ಕುಳಿತು ಜೂಜಾಟವಾಡುತ್ತಿದ್ದ 8 ಜನರನ್ನು ಸಬ್–ಅರ್ಬನ್ ಪೊಲೀಸರು, ನಗರ ಹೊರವಲಯದ ಉದನೂರ ಗ್ರಾಮದಿಂದ ಕಣ್ಣಿ ಮಿಣಜಗಿ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಮಲ್ಲಿಕಾರ್ಜುನ ಕಪನೂರ ಅವರ ಹೊಲದ ಬೇವಿನ ಮರದ ಕೆಳಗೆ ಕುಳಿತು ಜೂಜಾಟವಾಡುತ್ತಿದ್ದ 9 ಜನರನ್ನು ಸಿಸಿಬಿ ಘಟಕದ ಪೊಲೀಸರು ಬಂಧಿಸಿದ್ದಾರೆ.

ನಗರದ ಸುಲ್ತಾನಪುರ ರಸ್ತೆಯ ರೈಲ್ವೆ ಬ್ರಿಡ್ಜ್ ಹತ್ತಿರವಿರುವ ಇಟ್ಟಿಗೆ ಭಟ್ಟಿ ಹತ್ತಿರದ ಬೇವಿನ ಮರದ ಕೆಳಗೆ ಕುಳಿತು ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಬ್–ಅರ್ಬನ್ ಪೊಲೀಸ್ ಠಾಣೆಯ ಪಿಐ ನಟರಾಜ ಲಾಡೆ, ಸಿಬ್ಬಂದಿಗಳಾದ ಪುಂಡಲಿಕ, ಜಗದೀಶ, ಗುಂಡೆರಾವ, ಶಿವರಾಜ ದೇವರಗುಡಿ, ಪ್ರಭುರಾಜ, ಶಿವಕುಮಾರ ಮತ್ತು ಕುಮಾರ ಅವರು ದಾಳಿ ನಡೆಸಿ ಕಿಶೋರ ಕೊಲ್ಲಂಪಲ್ಲಿ, ಶಿವಲಿಂಗಪ್ಪ ಬಿರಾದಾರ, ಭಗವಂತ ಪೂಜಾರಿ, ಶಿವಕುಮಾರ ಬಿರಾದಾರ, ಮಹೇಂದ್ರ ಬಿರಾದಾರ, ವಿಜಯಕುಮಾರ ಪಾಟೀಲ, ಶಂಭುಲಿಂಗ ಯಳವಂತಗಿ, ಸಂಗಯ್ಯ ಮಠಪತಿ ಎಂಬುವವರನ್ನು ಬಂಧಿಸಿ 8,200 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ.

ನಗರ ಹೊರವಲಯದ ಉದನೂರ ಗ್ರಾಮದಿಂದ ಕಣ್ಣಿ ಮಿಣಜಗಿ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಮಲ್ಲಿಕಾರ್ಜುನ ಕಪನೂರ ಅವರ ಹೊಲದ ಬೇವಿನ ಮರದ ಕೆಳಗೆ ಕುಳಿತು ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ಅರುಣಕುಮಾರ, ಸಿಬ್ಬಂದಿಗಳಾದ ಮೃತ್ಯುಂಜಯ, ಅಶೋಕ ಕಟಕೆ, ಯಲ್ಲಪ್ಪ, ಶಿವಕುಮಾರ, ನಾಗರಾಜ ಅವರು ದಾಳಿ ನಡೆಸಿ ಬಸವರಾಜ ದುಧನಿ, ಶರಣಪ್ಪ ಶಿರಸಗಿ, ಬೀರಪ್ಪ ಪೂಜಾರಿ ಎಂಬುವವರನ್ನು ಬಂಧಿಸಿ 7,600 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ.

# ಮಿಣಜಗಿ; ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನ



ಕಲಬುರಗಿ:ತಾಲೂಕಿನ ಮಿಣಜಗಿ ಗ್ರಾಮದಲ್ಲಿ ಶ್ರೀ ದತ್ತಾ ಟುಟೋರಿಯಲ್ ಸಂಸ್ಥೆಯಿಂದ ಬೇಸಿಗೆ ಶಿಬಿರ ಮುಕ್ತಾಯ ಸಮಾರಂಭ ಹಾಗೂ 2025 –26 ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು ಹಾಗೂ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.

ಶಿಬಿರದ ಮುಕ್ತಾಯ ಸಮಾರಂಭದಲ್ಲಿ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಶಿಬಿರದ ಪ್ರಥಮ ಸ್ಥಾನ ಪಡೆದ ಶ್ವೇತಾ ರಮೇಶ್ ಕಡಣಿ ದ್ವಿತೀಯ ಸ್ಥಾನ ಪಡೆದ ಪ್ರಕೃತಿ ಸೈಬಣ್ಣ ಮಿಣಜಗಿ ತೃತೀಯ ಸ್ಥಾನ ಪಡೆದ ಭವಾನಿ ಕಡಣಿ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಶಿಬಿರದ ಎಲ್ಲಾ ಸಿಬ್ಬಂದಿ ವರ್ಗಕ್ಕೆ ವೇದಿಕೆಯಲ್ಲಿ ಎಲ್ಲ ಭಾಗಿಯಾದ ಪೂಜ್ಯರು, ಗಣ್ಯಮಾನ್ಯರು, ಮತ್ತು ಶಿಕ್ಷಕರು ಸಂಸ್ಥೆಯ ಸಿಬ್ಬಂದಿ ವರ್ಗಕ್ಕೆ ಸನ್ಮಾನಿಸಿದರು.

ಈ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಪೂಜ್ಯರು, ಗಣ್ಯಮಾನ್ಯರು, ಶಿಕ್ಷಕರು, ನೆರೆ ಗ್ರಾಮದ ಪಾಲಕರು, ಮತ್ತು ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಶ್ರೀ ಶಿವಕುಮಾರ್ ನಾಟಿಕರ್ ರಾಜ್ಯಾಧ್ಯಕ್ಷರು ಹಿಂದುಳಿದ ವರ್ಗಗಳ ವಿಭಾಗ ಜೆಡಿಎಸ್ ಇವರು ಶಿಕ್ಷಣದ ಮಹತ್ವದ ಹಾಗೂ ಸಂಸ್ಥೆಯ ಕುರಿತು ಮಾತನಾಡಿದರು. ಅದೇ ರೀತಿಯಾಗಿ ಸಂಸ್ಥೆಯ ಕಾರ್ಯದರ್ಶಿಗಳಾಗಿರುವಂತ ಸಂಗಮನಾಥ ನಾಟಿ–ಕರ್ ಅವರು ಸರಕಾರಿ ನೌಕರಿ ಪಡೆದರೆ ಒಂದೇ ಶಾಲೆಗೆ ಸೀಮಿತವಾಗಿರುತ್ತೇನೆ ಆದರೆ ಟ್ಯುಟೋರಿಯಲ್ ನಿಂದ ಎಲ್ಲಾ ಗ್ರಾಮದ ಮಕ್ಕಳ ಶಿಕ್ಷಕನಾಗಲು ಸಾಧ್ಯ ಎಂದು ಹರ್ಷ ವ್ಯಕ್ತಪಡಿಸಿದರು. ಈ ಶಿಬಿರವು ನಾಲ್ಕನೇ ವರ್ಷಕ್ಕೆ ಪಾದರ್ಪಣೆಯಾಗಿದ್ದು ಈ ಶಿಬಿರದಲ್ಲಿ 14 ಗ್ರಾಮದ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಈ ಶಿಬಿರದಲ್ಲಿ ತರಬೇತಿ ಪಡೆದ ಶ್ವೇತಾ ರಮೇಶ್ ಕಡಣಿ ವಿದ್ಯಾರ್ಥಿನಿ 2025 26 ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಸರ್ಕಾರಿ ಪ್ರೌಢಶಾಲೆ ಕಡಣಿ ಪ್ರಥಮ ಸ್ಥಾನ ಪಡೆದು ನಮ್ಮ ಸಂಸ್ಥೆಗೆ ಕೀರ್ತಿ ತಂದಿದ್ದಾಳೆ. ಶ್ರೀ ದತ್ತಾ ಟುಟೋರಿಯಲ್ಸ್ ವ್ಯವಸ್ಥಾಪಕರಾದ ಅನಿಲ ಆರ್. ನೈಕೋಡಿಯವರು

# ಮೇಳಕುಂದಾ (ಬಿ): ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಅಲ್ಲಂಪ್ರಭು ಪಾಟೀಲ್ ಅಡಿಗಲ್ಲು



ಕಲಬುರಗಿ:ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಕಲಬುರಗಿ ದಕ್ಷಿಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮೇಳಕುಂದಾ (ಬಿ), ಮೇಳಕುಂದಾ (ಕೆ), ಮಳನಿ, ಕಣ್ಣಿ, ಉದನೂರ್ ಸೇರಿದಂತೆ ಹಲವು ಗ್ರಾಮೀಣ ಸಂಪರ್ಕ ರಸ್ತೆ ಕಾಮಗಾರಿಗಳನ್ನು 12 ಕೋಟಿ ರು ಅನುದಾನದಲ್ಲಿ ಕೈಗೆತ್ತಿಕೊಂಡು ಹಳ್ಳಿ ಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿದೆ ಎಂದು ಶಾಸಕರಾದ ಅಲ್ಲಂಪ್ರಭು ಪಾಟೀಲ್ ಹೇಳಿದ್ದಾರೆ.

ಸೋಮವಾರ ಮೇಳಕುಂದಾ ಬಿ ಗ್ರಾಮದಲ್ಲಿ ಅಂಬಿಗರ ಚೌಡಯ್ಯ ಭವನ, ಅಂಬೇಡ್ಕರ್ ಸಮುದಾಯ ಭವನಗಳಿಗೆ ಕಂಪೌಂಡ್ ಗೋಡೆ ನಿರ್ಮಾಣ ಕಾಮಗಾ–ರಿಗೆ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮೇಳಕುಂದಾ ಹಾಗೂ ಸುತ್ತಿಲನ ಗಾಮಗಳಲ್ಲಿ ಮೂಲ ಸವಲತ್ತು ನಿರ್ಮಾಣಕ್ಕೆ ತಾವು ಬದ್ಧ ಎಂದರಲ್ಲದೆ ಈಗಾಗಲೇ ಮೇಳಕುಂದಾ– ಭೈರಾಮಡಗಿ, ರಸ್ತೆಗೆ 2 ಕೋಟಿ ರು, ಕೆಕಆರ್‌ಡಿಬಿ ಅಡಿಯಲ್ಲಿ ಸಂಪರ್ಕ ರಸ್ತೆಗೆ 35 ಲಕ್ಷ ರು, ಸಣ್ಣ ನೀರಾವರಿ ಚೆಕ್ ಡ್ಯಾಂಗೆ 1 ಕೋಟಿ ರು, ಮೇಳಕಿಂದಾ ಕೆ– ಮೇಳಕುಂದಾ ಬಿರಸ್ತೆ ಕಾಮಗಾರಿಗೆ 1 ಕೋಟಿರು,ಕಳವೆ ಬಾವಿಗಳು, ಹೈ ಮಾಸ್ಕ್ ದೀಪಗಳು, ಕನಕ ಭವನಕ್ಕೆ 20 ಲಕ್ಷ ರು, ಅಂಬಿಗರ ಚೌಡಯ್ಯ ಭವನಕ್ಕೆ 35 ಲಕ್ಷ ರು, ಅಂಬೇಡ್ಕರ್ ಸಮುದಾಯ ಭವನದ ಆವರಣ ಗೋಡೆ ಇತರೆ ಕೆಲಸಗಳಿಗೆ 40 ಲಕ್ಷ ರು ಅನುದಾನ ನೀಡಲಾಗಿದೆ ಎಂದು ಶಾಸಕ ಅಲ್ಲಂಪ್ರಭು ಹೇಳಿದರು.


ಸಚಿವ ಪ್ರಿಯಾಂಕ್ ಖರ್ಗೆಯವರ ಚಿಂತನೆಯ ಫಲವಾಗಿ ಕಲ್ಯಾಣ ಪಥ, ಪ್ರಗತಿ ಪಥದಲ್ಲಿ ದಕ್ಷಿಣ ಮತಕ್ಷೇತ್ರದಲ್ಲಿ 4 ಕಿ.ಮೀ. ರಸ್ತೆ ಅಭಿವೃದ್ಧಿ ಸಾಗಿದೆ. ಮೇಳಕುಂದಾ– ಗುಡೂರ್ ಪ್ರಗತಿ ಪಥದಲ್ಲಿ ಅಭಿವೃದ್ಧಿಯಾಗುತ್ತಿದೆ. ಸಾವಳಗಿ, ಕಮ್ಲಿ, ಉದನೂರ್ ಇಲ್ಲೆಲ್ಲಾ ಪ್ರಗತಿಗೆ ಒತ್ತು ನೀಡಲಾಗಿದೆ ಎಂದರು.

ನೀವು ಮತ ಕೊಟ್ಟು ಆರಿಸಿ ಕಳುಹಿಸಿದದೀರಿ, ನಿಮ್ಮ ಕೆಲಸ ಮಾಡಲು ನಾನು ಸಿದ್ಧನೆಂದು ಇದೇ ವೇಳೆ ಹೇಳಿದ ಶಾಸಕರು, ಅಭಿವೃದ್ಧಿ ಕೆಲಸಗಳಿಗೆ ಅಡೆತಡೆ ಮಾಡದೆ ಸಹಕರಿಸಲು ಕೋರಿದರು.

ಕಾಮಗಾರಿಗಳನನ್ನು ಮಾಡುವಾಗ ಕೆಲವು ಸಮಸ್ಯೆಗಳು ಬಂದರೂ ಕೂಡಾ ಊರವರೆಲ್ಲರೂ ಸೇ–ರಿಕೊಂಡು ಬಗೆಹರಿಸಿಕೊಂಡು ಅಭಿವೃದ್ಧಿ ಯೋಜನೆಗಳ ಮೇಲೆ ಜನ ಕಣ್ಣಿಡಬೇಕು. ಗುಣಣಟ್ಟದ ಕೆಲಸಗಳನ್ನು ತಮ್ಮೂರಲ್ಲಿ ಆಗುವಂತೆ ನೋಡಿಕೊಳ್ಳಬೇಕೆಂದು ಶಾಸಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಭೀಮರಾಯಗೌಡ ಕೊಳ್ಳೂರ, ಲಿಂಗರಾಜ ಕಣ್ಣಿ,ಶರಣು, ಮಹಾದೇವಪ್ಪ, ಶಾಂತಕುಮಾರ್ ಸೇರಿದಂತೆ ಗ್ರಾಮದ ಮುಖಂಡರು, ಸುತ್ತಲಿನ ಗ್ರಾಮಸ್ಥರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ಅದೃಷ್ಟವು ನಮ್ಮ ಕೈಯಲ್ಲೇ ಇದೆ!!



■ ಉದಯರಶ್ಮಿ ದಿನಪತ್ರಿಕೆ

ಜಯ್ ನುಡಿ

(ವ್ಯಕ್ತಿತ್ವ ವಿಕಸನ ಕುರಿತ ಲೇಖನ ಮಾಲಿಕೆ)

ಡಾ ಕಲಾಂ ತಮಿಳುನಾಡಿನ ರಾಮೇಶ್ವರಂನ ಅತ್ಯಂತ ಬಡ ಕುಟುಂಬದಲ್ಲಿ ಹುಟ್ಟಿದರು. ಬಾಲ್ಯದಲ್ಲಿ ಪತ್ರಿಕೆ ಮಾರುತ್ತಿದ್ದರು. ಅವರು ಪೈಲೆಟ್ ಆಗಬೇಕೆಂದು ಕನಸು ಕಂಡಿದ್ದರು. ಆದರೆ ಪೈಲೆಟ್ ಸಂದರ್ಶನದಲ್ಲಿ ಇವರಿಗೆ ಸಿಕ್ಕಿದ್ದು 9 ನೇ ಸ್ಥಾನ. ಆಯ್ಕೆಯಾಗಿದ್ದು ಕೇವಲ 8 ಜನ ಮಾತ್ರ ಆಗ ಅವರು ಧೃತಿಗೆಡದೆ, 'ನನಗಾಗಿ ವಿಧಿ ಬೇರೆ ದೊಡ್ಡ ಹಾದಿ ಸಿದ್ಧಪಡಿಸಿದೆ.' ಎಂದು ಸಕಾರಾತ್ಮಕವಾಗಿ ಯೋಚಿಸಿದರು. ಅದೇ ಯೋಚನೆ ಅವರನ್ನು 'ಇಂಡಿಯನ್ ಮಿಸೈಲ್ ಮ್ಯಾನ್ '(ಭಾರತದ ಕ್ಷಿಪಣಿ ತಂತ್ರಜ್ಞಾನದ ಪಿತಾಮಹ) ಮತ್ತು ಭಾರತದ ಜನಪ್ರಿಯ ರಾಷ್ಟ್ರಪತಿಯನ್ನಾಗಿ ಮಾಡಿತು. ಇದು ನಮ್ಮ ವಿಚಾರಗಳು ಹೇಗೆ ದೊಡ್ಡ ಬಾಗಿಲನ್ನು ತೆರೆಯುತ್ತವೆ ಎಂಬುದಕ್ಕೆ ಸಾಕ್ಷಿ.


**ಅದೃಷ್ಟವೆಂದರೆ?**

ಅದೃಷ್ಟ ಎನ್ನುವುದು ಕೇವಲ ಕಾಕತಾಳೀಯವಲ್ಲ. ಒಬ್ಬ ವ್ಯಕ್ತಿಯು ಸಕಾರಾತ್ಮಕ ದೃಷ್ಟಿಕೋನ ಹೊಂದಿದ್ದಾಗ, ಆತ ಸಂಕಷ್ಟಗಳಲ್ಲೂ ಅವಕಾಶವನ್ನು ಹುಡುಕುತ್ತಾನೆ. ಅದೇ ನಕಾರಾತ್ಮಕ ಚಿಂತಕನು ಉತ್ತಮ ಅವಕಾಶದಲ್ಲೂ ದೋಷವನ್ನೇ ಹುಡುಕುತ್ತಾನೆ. ನೀವು ನಿಮ್ಮ ವಿಚಾರಗಳನ್ನು ಸರಿಪಡಿಸಿಕೊಂಡಾಗ ಪರಿಸ್ಥಿತಿಗಳು ತಾವಾಗಿಯೇ ಸುಧಾರಿಸಲು ಆರಂಭಿಸುತ್ತವೆ. ರಾಲ್ಸ್ ವಾಲ್ಡೋ ಎಮರ್ಸನ್ ಹೇಳುವಂತೆ: 'ದುರ್ಬಲರು ಅದೃಷ್ಟವನ್ನು ನಂಬುತ್ತಾರೆ, ಆದರೆ ಬಲಿಷ್ಟರು ಕಾರಣ ಮತ್ತು ಪರಿಣಾಮದ ಮೇಲೆ ನಂಬಿಕೆ ಇಡುತ್ತಾರೆ.'

ನಮ್ಮ ಜೀವನದಲ್ಲಿ ಭಾಗ್ಯ ಎನ್ನುವುದು ಕೇವಲ ಆಕಸ್ಮಿಕವಾಗಿ ಬರುವಂಥದ್ದಲ್ಲ; ಅದು ನಮ್ಮ ಯೋಚನೆ, ಕೆಲಸ ಮತ್ತು ನಡವಳಿಕೆಯ ಪ್ರತಿಬಿಂಬವಾಗಿರುತ್ತದೆ. ವಿಚಾರಗಳು ಹಣೆಬರಹವನ್ನು ಬದಲಿಸುವುದು ಸಾಧ್ಯವೇ ಎಂದು ಕೇಳುವವರಿಗೆ ಇಲ್ಲಿ ಚರ್ಚಿಸುವ ವಿಚಾರಗಳು ದಾರಿದೀಪವಾಗಬಲ್ಲವು.

**ಸಕಾರಾತ್ಮಕ ಆಲೋಚನೆ**

ಅಮೇರಿಕದ ಸುಪ್ರಸಿದ್ಧ ಅಧ್ಯಕ್ಷರಲ್ಲಿ ಒಬ್ಬರಾದ ಅಬ್ರಹಾಂ ಲಿಂಕನ್ ಅವರು ಕಂಡ ಸೋಲುಗಳು ಅಷ್ಟಿಷ್ಟಲ್ಲ. ವ್ಯಾಪಾರದಲ್ಲಿ ನಷ್ಟ, ಪ್ರಿಯತಮೆಯ ಸಾವು, ಚುನಾವಣೆಯಲ್ಲಿ ಸತತ ಎಂಟು ಬಾರಿ ಸೋಲು. ಹೀಗೆ ಅಸಂಖ್ಯಾತ ಸೋಲುಗಳನ್ನು ಕಂಡರೂ ಅವರು 'ನಾನು ಸೋತಿದ್ದೇನೆ ಹೊರತು ಬಿದ್ದಿಲ್ಲ.' ಎಂದು ಸಕಾರಾತ್ಮಕವಾಗಿಯೇ ಯೋಚಿಸಿದರು. ಈ ದೃಢವಾದ ವಿಚಾರಧಾರೆ ಮತ್ತು ಅದೃಷ್ಟವು ತನ್ನ ಕೈಯಲ್ಲೇ ಇದೆ ಎಂಬ ನಂಬಿಕೆ ಅವರನ್ನು ವಿಶ್ವದ ಪ್ರಭಾವಶಾಲಿ ನಾಯಕನನ್ನಾಗಿಸಿತು. ನಾನು ಏನನ್ನಾದರೂ ಸಾಧಿಸಿಯೇ ತೀರುತ್ತೇನೆ ಎಂಬ ಸಕಾರಾತ್ಮಕ ಆಲೋಚನೆಗಳನ್ನು ಮಾಡಿದರೆ ಅದೃಷ್ಟದ





ಬಾಗಿಲನ್ನು ಬಡಿದು ನಮ್ಮತ್ತ ತಿರುಗಿಸಿಕೊಳ್ಳುವಂತೆ ಮಾಡುತ್ತವೆ. ನಮ್ಮ ಆಲೋಚನೆಗಳು ನಮ್ಮ ಬದುಕಿನ ದಿಕ್ಕನ್ನು ಬದಲಿಸುವ ಶಕ್ತಿಯನ್ನು ಹೊಂದಿವೆ. ಮನಸ್ಸಿದ್ದರೆ ಮಾರ್ಗ ಎಂಬಂತೆ ಸೋಲನ್ನೇ ನೆನೆಯುವ ಬದಲು, ಗೆಲ್ಲುವ ಹಾದಿಯ ಬಗ್ಗೆ ಯೋಚಿಸಿದರೆ ಅವಕಾಶಗಳು ತಾವಾಗಿಯೇ ಒದಗಿ ಬರುತ್ತವೆ. ಸಕಾರಾತ್ಮಕ ಯೋಚನೆಗಳೇ ಅದೃಷ್ಟದ ಬಾಗಿಲು ತೆರೆಯುವ ಮೊದಲ ಮೆಟ್ಟಿಲು.

**ಸಿದ್ಧತೆ**

ಅದೃಷ್ಟದ ಬಾಗಿಲು ತೆರೆಯಲು ಕೇವಲ ಆಲೋಚನೆ ಸಾಕಾಗುವುದಿಲ್ಲ, ಆ ಆಲೋಚನೆಗೆ ತಕ್ಕ ಸಿದ್ಧತೆ ಇರಬೇಕು. ಉತ್ತಮ ಆರೋಚನೆಗಳು ನಮಗೆ ಸರಿಯಾದ ಹಾದಿಯನ್ನು ತೋರಿಸುತ್ತವೆ ಮತ್ತು ಆ ಹಾದಿಯಲ್ಲಿ ನಡೆಯಲು ಬೇಕಾದ ಶಕ್ತಿಯನ್ನು ನೀಡುತ್ತವೆ. ಸೆನೆಕಾ ಎಂಬ ದಾರ್ಶನಿಕ ಹೇಳಿದ ಈ ಮಾತು ಅದೃಷ್ಟಕ್ಕೆ ಅತುತ್ತಮ ವ್ಯಾಖ್ಯಾನ ನೀಡುತ್ತದೆ: ಲಕ್ ಈಸ್ ವಾಟ್ ಹ್ಯಾಪನ್ಸ್ ವೆನ್ ಪ್ರಿಪರೇಶನ್ ಮೀಟ್ಸ್ ಅಪಾರ್ಚುನಿಟಿ.'( ಸಿದ್ಧತೆ ಮತ್ತು ಅವಕಾಶಗಳು ಒಂದಾದಾಗ ಸಂಭವಿಸುವುದೇ ಅದೃಷ್ಟ.)

**ಕಲಿಕೆ**


ಕಾಲ ಬದಲಾಗುತ್ತಲೇ ಇರುತ್ತದೆ. ಕಾಲಕ್ಕೆ ತಕ್ಕಂತೆ ಹೊಸ ಕೌಶಲ್ಯಗಳನ್ನು ಕಲಿಯುವುದು ಬಹಳ ಮುಖ್ಯ. ಬದಲಾಗುತ್ತಿರುವ ಜಗತ್ತಿಗೆ ನಾವು ಹೊಂದಿಕೊಂಡಾಗ ಮಾತ್ರ ಹೊಸ ಅವಕಾಶಗಳು ಬಾಗಿಲು ತೆರೆಯುತ್ತವೆ. ಜ್ಞಾನವಿದ್ದವನಿಗೆ ಅದೃಷ್ಟ ಒಂದಲ್ಲ ಒಂದು ರೂಪದಲ್ಲಿ ಒಲಿದು ಬರುತ್ತವೆ. ಇಂಜಿನಿಯರಿಂಗ್ ಓದುವ ಕಾಲದಲ್ಲಿ 'ಹುಡುಗಿಯರಿಗೆ ಇಲ್ಲಿ ಪ್ರವೇಶವಿಲ್ಲ' ಎಂಬ ನಿಯಮವಿದ್ದಾಗಲೂ ತಮ್ಮ ಆಲೋಚನೆಯಿಂದಲೇ ಅದನ್ನು ಎದುರಿಸಿದರು. ಸುಧಾ ಮೂರ್ತಿ. ಟಾಟಾ ಕಂಪನಿಗೆ ಪತ್ರ ಬರೆದು ತಮ್ಮ ಹಕ್ಕನ್ನು ಪಡೆದರು. 'ನನ್ನಿಂದ ಸಾಧ್ಯ' ಎಂಬ ವಿಶ್ವಾಸ ಇಂದು ಅವರನ್ನು ಇಡೀ ಪ್ರಪಂಚವೇ ಗುರುತಿಸುವ ದಾನಿ ಮತ್ತು ಲೇಖಕಿಯನ್ನಾಗಿ ಮಾಡಿದೆ.

**ಕೃತಜ್ಞತೆ**

ನಮ್ಮ ಬಳಿ ಇರುವುದಕ್ಕೆ ನಾವು ಎಷ್ಟು ಕೃತಜ್ಞರಾಗಿರುತ್ತೇವೆಯೋ, ಅಷ್ಟು ಹೆಚ್ಚು ಸಂತೋಷ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಕೊರತೆಗಳ ಬಗ್ಗೆ ದೂರುವುದನ್ನು ಬಿಟ್ಟು, ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಬೆಳೆಯುವ ಹಂಬಲವಿರಬೇಕು. ಅದೃಷ್ಟವು ಸೋಮಾರಿಗಳನ್ನು ಹುಡುಕಿಕೊಂಡು ಬರುವುದಿಲ್ಲ. ಸರಿಯಾದ ಯೋಚನೆ ಮತ್ತು ಯೋಜನೆಯೊಂದಿಗೆ ಕಠಿಣ ಪರಿಶ್ರಮ ಪಟ್ಟಾಗ, ಆ ಪರಿಶ್ರಮವೇ ಕಾಲಕ್ರಮೇಣ ಅದೃಷ್ಟವಾಗಿ ಮಾರ್ಪಡುತ್ತದೆ. ಶ್ರಮವೇ ಸೌಭಾಗ್ಯದ ಜನನಿ' ಎಂಬ ಮಾತನ್ನು ನೆನಪಿಡಬೇಕು.

**ಸಮಯದ ಮಹತ್ವ**

ಕಳೆದು ಹೋದ ಸಮಯ ಮತ್ತು ಕೈತಪ್ಪಿದ ಅವಕಾಶಗಳು ಮತ್ತೆ ಸಿಗುವುದಿಲ್ಲ. ಯಾರು ಸಮಯದ ಮಹತ್ವ ಅರಿತು ನಡೆಯುತ್ತಾರೋ ಅವರನ್ನು ಕಾಲವು ಉನ್ನತ ಸ್ಥಾನದಲ್ಲಿರುತ್ತದೆ. ಸರಿಯಾದ



ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ನಿಮ್ಮ ಭಾಗ್ಯವನ್ನು ಖಂಡಿತ ಬದಲಿಸುತ್ತದೆ.. ನಾವು ಯಾವುದರ ಬಗ್ಗೆ ಹೆಚ್ಚು ಯೋಚಿಸುತ್ತೇವೆಯೋ ಮತ್ತು ಗಮನ ಹರಿಸುತ್ತೇವೆಯೋ ಅದು ನಮ್ಮ ಜೀವನದಲ್ಲಿ ವೃದ್ಧಿಯಾಗುತ್ತದೆ. ನಾವು ಸೋಲು ಭಯ ಅಸಾಧ್ಯತೆಗಳ ಬಗ್ಗೆಯೇ ಯೋಚಿಸುತ್ತಿದ್ದರೆ, ನಮ್ಮ ಸುತ್ತಲಿನ ಅವಕಾಶಗಳು ನಮಗೆ ಕಾಣಿಸದಂತಾಗುತ್ತವೆ. ಇದಕ್ಕೆ ಪೂರಕವಾಗಿ ಜೇಮ್ಸ್ ಅಲೆನ್ ಅವರ ಸುಂದರವಾದ ಉಕ್ತಿಯಿದೆ: 'ಅ ಮ್ಯಾನ್ ಈಸ್ ಲಿಟರಲಿ ವಾಟ್ ಹಿ ಥಿಂಕ್ಸ್, ಹೀಸ್ ಕ್ಯಾರಕ್ಟರ್ ಬೀಯಿಂಗ್ ದ ಕಂಪ್ಲೀಟ್ ಸಮ್ ಆಫ್ ಆಲ್ ಹೀಸ್ ಥಾಟ್ಸ್.'

**ಆಕರ್ಷಣೆಯ ನಿಯಮ**

ವಿಶ್ವದ ನಿಯಮದ ಪ್ರಕಾರ, ನಾವು ಯಾವ ರೀತಿಯ ಕಂಪನಗಳನ್ನು ಹೊರಹಾಕುತ್ತೇವೆಯೋ ಅದೇ ರೀತಿಯ ಫಲಿತಾಂಶಗಳನ್ನು ಪಡೆಯುತ್ತೇವೆ. ನಾವು 'ನನ್ನಿಂದ ಸಾಧ್ಯ.' 'ನಾನು ಯಶಸ್ವಿಯಾಗುತ್ತೇನೆ.' ಎಂಬ ಧನಾತ್ಮಕ ವಿಚಾರಗಳನ್ನು ಬಿತ್ತಿದಾಗ ನಮ್ಮ ಸುಪ್ತ ಮನಸ್ಸು ಆ ಗುರಿಯನ್ನು ತಲುಪಲು ಬೇಕಾದ ದಾ–ರಿಗಳನ್ನು ಹುಡುಕಲು ಆರಂಭಿಸುತ್ತದೆ. ಆಗ ನಮಗೆ ಅನಿರೀಕ್ಷಿತವಾಗಿ ಸಹಾಯ ಹಸ್ತಗಳು ದೊರೆಯುತ್ತವೆ. ಇದನ್ನೇ ಜನರು 'ಅದೃಷ್ಟ ಒಲಿಯಿತು' ಎಂದು ಹೇಳುತ್ತಾರೆ.. ಜೀವನವೆಂಬುದು ನಾವು ದಿನವಿಡೀ ಯೋಚಿಸುವ ವಿಚಾರಗಳ ಮೊತ್ತವಾಗಿದೆ. ಅನೇಕರು ಅದೃಷ್ಟ ಎನ್ನುವುದ ಆಕಾಶದಿಂದ ಬೀಳುವ ಪವಾಡ ಅಥವಾ ಹಣೆಬರಹ ಎಂದು ಎಂದು ನಂಬುತ್ತಾರೆ. ಆದರೆ ವಾಸ್ತವವದಲ್ಲಿ, ಅದೃಷ್ಟ ಎಂಬುದು ನಮ್ಮ ವಿಚಾರಗಳಿಂದ ಉಂಟಾಗುವ ಕ್ರಿಯಗಳ ಫಲಿತಾಂಶವಾಗಿದೆ.

**ಶಿಲ್ಪಿಗಳು**

ಕೊನೆಯದಾಗಿ, ನಮ್ಮ ವಿಚಾರಗಳೇ ನಮ್ಮ ಬದುಕಿನ ಶಿಲ್ಪಿಗಳು. ನಿಮ್ಮ ವಿಚಾರಗಳು ಮಿತಿಯಾಗಿದ್ದರೆ ನಿಮ್ಮ ಯಶಸ್ಸೂ ಮಿತಿಯಾಗಿರುತ್ತದೆ. ನಿಮ್ಮ ಆಲೋಚನೆಗಳನ್ನು ವಿಶಾಲವಾಗಿಸಿ ಕಠಿಣ ಪರಿಶ್ರಮದ ಮೇಲೆ ನಂಬಿಕೆ ಇಡಿ. ಮಹಾತ್ಮ ಗಾಂಧೀಜಿಯವರ ಈ ಮಾತುಗಳನ್ನು ನೆನಪಿಡಿ: 'ಕೀಪ್ ಯುವರ್ ಥಾಟ್ಸ್ ಪಾಸಿಟಿವ್ ಬಿಕಾಸ್ ಯುವರ್ ಥಾಟ್ಸ್ ಬಿಕಮ್ ಯುವರ್ ವರ್ಡ್ಸ್ ಕೀಪ್ ಯುವರ್ ವರ್ಡ್ಸ್ ಪೊಸಿಟಿವ್ ಬಿಕಾಜ್ ಯುವರ್ ವರ್ಡ್ಸ್ ಬಿಕಮ್ ಯುವರ್ ಬಿಹೇವಿರ್ ಯುವರ್ ಬಿಹೇವಿಯರ್ ಬಿಕಮ್ಸ್ ಯುವರ್ ಹ್ಯಾಬಿಟ್ಸ್.' ಹೀಗೆ ನಮ್ಮ ವಿಚಾರಗಳನ್ನು ಸರಿಪಡಿಸಿಕೊಂಡರೆ, ಅದೃಷ್ಟದ ಬಾಗಿಲು ತಂತಾನೇ ತೆರೆಯುತ್ತದೆ. ಅದೃಷ್ಟವೆಂಬುದು ಮೇಲಿಂದ ಉದುರುವುದಿಲ್ಲ. ಅದು ನಮ್ಮ ಸತತ ಪ್ರಯತ್ನದ ಫಲ. ನಿಮ್ಮ ಮೇಲೆ ನಿಮಗೆ ನಂಬಿಕೆಯಿರಲಿ. ಉತ್ತಮ ದಾರಿಯಲ್ಲಿ ಸಾಗುತ್ತಿದ್ದರೆ ನಿಮ್ಮ ಭಾಗ್ಯ ನಿಮ್ಮನ್ನು ಹಿಂಬಾಲಿಸುತ್ತದೆ. ಅದೃಷ್ಟದ ಬಾಗಿಲು ತೆರೆದು ನಿಮ್ಮನ್ನು ತೆರೆದ ತೋಳುಗಳಿಂದ ಸ್ವಾಗತಿಸುತ್ತದೆ.

ಲೇಖನ
■ ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



# ರೋಗ ಮತ್ತು ಭಯ

ಮನದಂಗಳ


■ ಉದಯರಶ್ಮಿ ದಿನಪತ್ರಿಕೆ

ಒಂದು ತಂಪಾದ ಸಂಜೆಯ ವೇಳೆಯಲ್ಲಿ ಭಗವಂತ ಮತ್ತು ರೋಗ ಈ ಇಬ್ಬರೂ ಪರಸ್ಪರ ಉಭಯ ಕುಶಲೋಪರಿಗಳನ್ನು ವಿಚಾ–ರಿಸಿಕೊಳ್ಳುತ್ತಿದ್ದರು. ಜನರು ಭಗವಂತನನ್ನು



ಪ್ರಾರ್ಥಿಸಿದರೆ, ರೋಗವನ್ನು ಜನರು ತಮ್ಮಿಂದ ಬಹಳ ದೂರವಿಡುತ್ತಿದ್ದರು. ಹೀಗೆ ಇಬ್ಬರೂ ಮಾತನಾಡುತ್ತಿರುವಾಗ ಪರಸ್ಪರ ತಮ್ಮ ಕೆಲಸಗಳ ಕುರಿತು ಚರ್ಚಿಸುತ್ತಾ ಭಗವಂತ ಹೇಳುತ್ತಾನೆ, ನಾನು ಈ ಪ್ರಪಂಚದ ಎಲ್ಲಾ ಜೀವರಾಶಿಗಳನ್ನು ಕಾಪಾಡುತ್ತೇನೆ ಎಂದು. ಆಗ ರೋಗವು, ನಾನು ಭೀಕರ ರೋಗವನ್ನು ಪ್ರಪಂಚದ ಎಲ್ಲಾ ಕಡೆಗೂ ಮತ್ತು ಎಲ್ಲರಿಗೂ ಹರಡುತ್ತೇನೆ ಎಂದು ಹೇಳಿತು. ಹೀಗೆ ಮಾತನಾಡುತ್ತಾ ರೋಗವು ನಾನು ಒಂದು ತಿಂಗಳಲ್ಲಿ ಸುಮಾರು ಐನೂರು ಜನಕ್ಕೆ ರೋಗವನ್ನು ಹರಡಿ ಅವರನ್ನು ಸಾಯಿಸುತ್ತೇನೆ ಎಂದು ಭಗವಂತನಿಗೆ ಹೇಳಿತು. ಅಲ್ಲಿಗೆ ರೋಗ ಮತ್ತು ಭಗವಂತರ ಮಾತುಕತೆಗಳು ಮುಗಿದು, ಇಬ್ಬರೂ ತಮ್ಮ ತಮ್ಮ ಕೆಲಸದ ನಿಮಿತ್ತ ಅಲ್ಲಿಂದ ಹೊರಡುತ್ತಾರೆ.

ಸುಮಾರು ಒಂದೆರಡು ತಿಂಗಳು ಕಳೆದ ನಂತರ ಮತ್ತೆ ಭಗವಂತ ಮತ್ತು ರೋಗ ಇಬ್ಬರೂ ಅದೇ ಸ್ಥಳದಲ್ಲಿ ಪರಸ್ಪರ ಭೇಟಿಯಾಗುತ್ತಾರೆ. ಆಗ ಭಗವಂತನು, ಕಳೆದ ಬಾರಿ ನಾವಿಬ್ಬರು ಚರ್ಚಿಸಿದಾಗ ನೀನು ಒಂದು ತಿಂಗಳಲ್ಲಿ ಒಟ್ಟು ಐನೂರು ಮಂದಿಗೆ ರೋಗವನ್ನು ಹರಡಿ ಸಾಯಿಸುತ್ತೇನೆ ಎಂದು ತಿಳಿಸಿದ್ದೆ. ಆದರೆ ಈಗ ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಏಕೆ ನೀನು ನಿನ್ನ ಮಾತನ್ನು ತಪ್ಪಿದೆ? ಎಂದು ರೋಗದಲ್ಲಿ ಕೇಳುತ್ತಾನೆ. ಆಗ ರೋಗವು ನಗುತ್ತಾ, ನಾನು ನಿನಗೆ ಕೊಟ್ಟ ಮಾತನ್ನು ಎಲ್ಲೂ ತಪ್ಪಿಲ್ಲ, ನಾನು ನಿನಗೆ ತಿಳಿಸಿದ್ದಂತೆ ಒಟ್ಟು ಐನೂರು ಮಂದಿಗಷ್ಟೇ ರೋಗವನ್ನು ಹರಡಿದ್ದೇನೆ. ಆದರೆ ಉಳಿದ ನಾಲ್ಕೂವರೆ ಸಾವಿರ ಮಂದಿ ರೋಗದ ಭಯದಿಂದಲೇ ತಮ್ಮ ಪ್ರಾಣವನ್ನು ಬಿಟ್ಟಿದ್ದಾರೆ, ಅದಕ್ಕೆ ನಾನೇನು ಮಾಡಲಿ ಎಂದು ಭಗವಂತನಿಗೆ



ಹೇಳಿತು.

ಸಮಾಜದಲ್ಲಿ ಯಾವುದೇ ಒಂದು ಸಮಸ್ಯೆಯಿಂದ ಕಡಿಮೆ ಮಂದಿ ಹಾನಿಗೆ ಒಳಗಾದರೆ ಭಯದಿಂದ ಹಾನಿಗೆ ಒಳಗಾಗುವವರ ಸಂಖ್ಯೆಯು ಅದರ ದುಪಟ್ಟಿರುತ್ತದೆ. ಯಾರು ಸಮಸ್ಯೆಯ ವಿರುದ್ಧ ಸೆಟೆದು ನಿಂತು ಹೋರಾಡುತ್ತಾರೋ ಅವರಿಗೆ ಬದುಕಿನ ಹಾದಿಯು ಗೋಚರಿಸುತ್ತದೆ. ಸಮಸ್ಯೆಗೆ ಭಯಪಟ್ಟು ಕುಳಿತವ ಎಲ್ಲರಿಗಿಂತ ಮೊದಲೇ ಸಮಸ್ಯೆಯ ಸುಳಿಗೆ ಸಿಲುಕಿ ನರಳಾಡಿ ಬದುಕನ್ನು ಅಂತ್ಯ ಮಾಡಿಕೊಳ್ಳುತ್ತಾನೆ. 'ಧೈರ್ಯಂ ಸರ್ವತ್ರ ಸಾಧನಂ'. ಎಂಬ ಗಾದೆ ಮಾತಿನಂತೆ ಧೈರ್ಯವಿರುವಾತ ಎಂತಹ ಸಮಸ್ಯೆಯನ್ನೂ ಧೈರ್ಯ ಕೆಡದೇ ಎದುರಿಸಿ ಗೆದ್ದು, ಭಯಕ್ಕೇ ಸವಾಲಾಗಿ ಬೆಳೆಯುತ್ತಾನೆ.



ಲೇಖನ
■ ಸಂತೋಷ್ ರಾವ್ ಪೆರ್ಮುಡ
ಪೆರ್ಮುಡ ಮನೆ, ಪಟ್ರಮೆ
ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ ತಾಲೂಕು
ದ.ಕ ಜಿಲ್ಲೆ–574198
ದೂ:9742884160



# ಮೊಬೈಲ್ ಪತ್ತೆಗೈದು ವಾರಸುದಾರರಿಗೆ ಹಸ್ತಾಂತರ



ಕಾಳಗಿ:ಸಾರ್ವಜನಿಕರು ಕಳೆದುಕೊಂಡಿದ್ದ 15 ಮೊಬೈಲ್ ಫೋಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾದ ಕಾಳಗಿ ಪೊಲೀಸರು, ಅವುಗಳನ್ನು ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ.

ಶಹಾಬಾದ್ ಉಪ ವಿಭಾಗದ ಡಿವೈಎಸ್ಪಿ ಶಂಕರಗೌಡ ಪಾಟೀಲ್ ಮಾರ್ಗದರ್ಶನ ಹಾಗೂ ಕಾಳಗಿ ವೃತ್ತ ನಿರೀಕ್ಷಕ ಜಗದೇವಪ್ಪ ಪಾಳಾ ಮೇಲ್ವಿಚಾರಣೆಯಲ್ಲಿ ಈ ಕಾರ್ಯಾಚರಣೆ ನಡೆದಿದೆ. ಠಾಣೆಯ ಪಿಎಸ್ಐ ತಿಮ್ಮಯ್ಯ ಬಿ.ಕೆ. ನೇತೃತ್ವದಲ್ಲಿ ಸಿಬ್ಬಂದಿಗಳಾದ ಶ್ರೀಶೈಲ್ ಎಚ್.ಸಿ. ಮತ್ತು ಮಾರುತಿ ಪಿ.ಸಿ. ಅವರು ಕೇಂದ್ರ ಸರಕಾರದ ಸಿಇಐಆರ್ ಪೋರ್ಟಲ್ ತಂತ್ರಜ್ಞಾನದ ಮೂಲಕ ಕಳೆದು ಹೋಗಿದ್ದ ಮೊಬೈಲ್‌ಗಳನ್ನು ಪತ್ತೆಹಚ್ಚುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.ಠಾಣೆಯಲ್ಲಿ ನಡೆದ ಮೊಬೈಲ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಡಿವೈಎಸ್ಪಿ ಶಂಕರಗೌಡ ಪಾಟೀಲ್, ಸಾರ್ವಜನಿಕರು ಮೊಬೈಲ್ ಕಳೆದುಹೋದ ತಕ್ಷಣ ವಿಳಂಬ ಮಾಡದೆ ಪೊಲೀಸ್ ಠಾಣೆಗೆ ದೂರು ನೀಡಬೇಕು. ಸಿಇಐಆರ್ ಪೋರ್ಟನಲ್ಲಿ

ಸಾರ್ವಜನಿಕರು ಕಳೆದುಕೊಂಡಿದ್ದ 15 ಮೊಬೈಲ್ ಫೋಗಳನ್ನು ಪತ್ತೆಹಚ್ಚಿ ಅವುಗಳನ್ನು ಕಾಳಗಿ ಪೊಲೀಸರು ವಾರಸುದಾರರಿಗೆ ಹಸ್ತಾಂತರಿಸುತ್ತಿರುವುದು.

ಕಡ್ಡಾಯವಾಗಿ ಮಾಹಿತಿ ನೋಂದಾಯಿ ಸುವುದ–ರಿಂದ ಮೊಬೈಲ್ ದುರ್ಬಳಕೆ ತಡೆಯಬಹುದು ಮತ್ತು ಸುಲಭವಾಗಿ ಪತ್ತೆಹಚ್ಚಬಹುದು ಎಂದು ಸಲಹೆ ನೀಡಿದರು. ಕೈಬಿಟ್ಟು ಹೋಗಿದ್ದ ಮೊಬೈಲ್ ಗಳನ್ನು ಮರಳಿ ಪಡೆದ ಸಾರ್ವಜನಿಕರು ಕಾಳಗಿ ಪೊಲೀಸರ ತಾಂತ್ರಿಕ ಕೌಶಲ್ಯ ಹಾಗೂ ತ್ವರಿತ ಕಾರ್ಯಕ್ಷಮತೆಯನ್ನು ಮುಕ್ತಕಂಠದಿಂದ ಶ್ಲಾಘಿಸಿ, ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಮೌನೇಶ ಬಡಿಗೇರ ಸೇರಿದಂತೆ ಇಲಾಖೆಯ ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಪೊಲೀ ಸರ ಈ ಜನಸ್ನೇಹಿ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

# ಬಂದಿಗಳ ಮನ ಪರಿವರ್ತನೆಗಾಗಿ ಸ್ಥಳೀಯ ಎನ್‌ಜಿಓ ಯಿಂದ ಎರಡು ಟಿ.ವ್ಹಿ.ಗಳ ಕಾಣಿಕೆ



ಕಲಬುರಗಿ:ಕಡಗಂಚಿಯ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ರವರು ರವಿವಾರ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿನ ಬಂದಿಗಳ ಮನ ಪರಿವರ್ತನೆಗಾಗಿ ಎರಡು ಟಿವಿಗಳನ್ನು ಕಾಣಿಕೆಯಾಗಿ ನೀಡಿದ್ದಾರೆ.

ಕಡಗಂಚಿ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಸಂಸ್ಥೆಯಕಾರ್ಯದರ್ಶಿಫಾದರ್‌ವಿಲಿಯಂಮಿರಂಡಾಅವರು ಮಾತನಾಡಿ, ಕಲಬುರಗಿ ಕೇಂದ್ರ ಕಾರಾಗೃಹದ ಬಂದಿಗಳು ಟಿವಿಗಳಲ್ಲಿ ಬರುವ ಉತ್ತಮವಾದ ಕಾರ್ಯಕ್ರಮಗಳನ್ನು ವೀಕ್ಷಿಸಿ ಇದರ ಲಾಭವನ್ನು ಪಡೆಯಬೇಕೆಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯ ಅಧೀಕ್ಷಕ ರಾಕೇಶ್ ಕಾಂಬಳೆ ಅವರು ಮಾತನಾಡಿ, ದೂರದರ್ಶನವು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. ಡಿಸ್ಕವರಿಯಂತಹ ಅನೇಕ ಶೈಕ್ಷಣಿಕ ಚಾನೆಲ್‌ಗಳು ವೈಜ್ಞಾನಿಕ ಜ್ಞಾನವನ್ನು ಹೆಚ್ಚಿಸಲು ಸಹಾಯ ಮಾಡಲಿವೆ. ಇದನ್ನು ಸಾಮೂಹಿಕ ಶಿಕ್ಷಣಕ್ಕೆ ಅದ್ಭುತ ಮಾಧ್ಯಮವಾಗಿ ಬಳಸಬಹುದಾಗಿದೆ. ಬಂದಿಗಳು ಉತ್ತಮ ನಡೆತೆಯನ್ನು ಹೊಂದಿ ಇಲ್ಲಿಂದ ಒಳ್ಳೆಯ ವ್ಯಕ್ತಿಯಾಗಿ ಸಮಾಜಕ್ಕೆ ಉತ್ತಮ ಸಮಾಜಮುಖಿ ಕಾಯಕದಲ್ಲಿ ತೊಡಗಿ ತಮ್ಮ ಕುಟುಂಬ ಮತ್ತು ಸಮಾಜಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಲಿ ಎಂಬ ಸದುದ್ದೇಶದಿಂದ ಕಡಗಂಚಿಯ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್‌ರವರು 2 ಟಿವಿಗಳನ್ನು ಕಾಣಿಕೆಯಾಗಿ ನೀಡಿರುವುದಕ್ಕೆ ಇಲಾಖೆ ವತಿಯಿಂದ ಅವ–ರಿಗೆ ತುಂಬು ಹೃದಯದ ಅಭಿನಂದನೆಗಳು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಹಾಯಕ ಅಧೀಕ್ಷಕರಾದ ಬಿ ಸುರೇಶ್, ಶಿಕ್ಷಕ ನಾಗರಾಜ್ ಮೂಲಗೆ ಹಾಗೂ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಕಡಗಂಚಿಯ ಸದಸ್ಯರಾದ ಥಾಮಸ್ ಹಾಗೂ ಶಿಕ್ಷಕಿಯರಾದ ಜೈಶೀಲಾ, ಕಲಾವತಿ, ಅಲ್ಫೋನ್ಸ್, ರಂಜಿತಾ, ಅನುಷಾ ಉಪಸ್ಥಿತರಿದ್ದರು.

# ಎಲ್‌ಪಿಜಿ ಕೊರತೆಯಿಲ್ಲ, ವದಂತಿಗಳಿಗೆ ಕಿವಿಗೊಡಬೇಡಿ

ಕಲಬುರಗಿ: ಜಿಲ್ಲೆಯಲ್ಲಿ ಗೃಹ ಬಳಕೆಯ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್‌ಗಳ ಕೊರತೆ ಇಲ್ಲದಿರುವುದರಿಂದ ಸಾರ್ವಜನಿಕರು ಸಾಮಾಜಿಕ ಜಾಲತಾಣಗಳ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು ಎಂದು ಆಹಾರ ಮತ್ತು ನಾಗ–ರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ದೇಶಾದ್ಯಂತ ಉತ್ಪಾದನೆ ಹೆಚ್ಚಿರುವುದರಿಂದ ಅಡುಗೆ ಅನಿಲದ ಕೊರತೆಯಿಲ್ಲ. ಜಿಲ್ಲೆಯಲ್ಲೂ ಸಾಕಷ್ಟು ದಾಸ್ತಾನು ಇದ್ದು, ಗ್ರಾಹಕರು ಆತಂಕದಿಂದ ಹೆಚ್ಚುವರಿ ಸಿಲಿಂಡರ್ ಸಂಗ್ರಹಿಸುವ ಅಗತ್ಯವಿಲ್ಲ. ಒಟ್ಟಿಗೆ ಬುಕಿಂಗ್ ಮಾಡುತ್ತಿರುವುದರಿಂದ ಐವಿಆರ್‌ಎಸ್ (ಖಗಿಖಖ) ವ್ಯವಸ್ಥೆಯಲ್ಲಿ ದಟ್ಟಣೆ ಉಂಟಾಗುತ್ತಿದೆ. ಇದಕ್ಕಾಗಿ ಐಓಸಿಎಲ್, ಎಚ್‌ಪಿಸಿ–ಎಲ್ ಹಾಗೂ ಬಿಪಿಸಿಎಲ್ ಕಂಪನಿಗಳು ಮಿಸ್ಡ್ ಕಾಲ್, ವಾಟ್ಸಾಪ್, ಮೊಬೈಲ್ ಆಪ್, ಒಎಂಸಿ ಪೋರ್ಟಲ್ ಮತ್ತು ಪೇಟಿಎಂ/ಫೋನ್ ಪೇ ಸೇ–ರಿದಂತೆ 6 ಪರ್ಯಾಯ ಬುಕಿಂಗ್ ವಿಧಾನಗಳನ್ನು ಕಲ್ಪಿಸಿವೆ. ಬೇಡಿಕೆ ನಿರ್ವಹಣೆಗೆ ಪ್ರತಿ ಸಿಲಿಂಡರ್ ವಿತರಣೆಯ ನಂತರ 25 ದಿನಗಳ ಇಂಟರ್–ಬುಕಿಂ–ಗ್ ಅವಧಿ ನಿಗದಿಪಡಿಸಲಾಗಿದೆ. ವಿತರಣೆಯಲ್ಲಿ ಸಮಸ್ಯೆ ಕಂಡುಬಂದಲ್ಲಿ ತಾಲೂಕು ಮಟ್ಟದಲ್ಲಿ ತಹಶೀಲ್ದಾರರನ್ನು ಅಥವಾ ಜಿಲ್ಲಾ ಇಲಾಖಾ ಕಚೇರಿ ದೂರವಾಣಿ ಸಂಖ್ಯೆ: 08472–200112 ಕ್ಕೆ ಸಂಪರ್ಕಿಸಿ ದೂರು ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಇಂದಿನಿಂದ ಶಿಶಿಕ್ಷು (ಅಪ್ರೆಂಟಿಶಿಫ್) ತರಬೇತಿಗಾಗಿ ಕ್ಯಾಂಪಸ್ ಸಂದರ್ಶನ

ಕಲಬುರಗಿ: ಬೆಂಗಳೂರಿನ ಮೆ॥ ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ವತಿಯಿಂದ ಇದೇ ಜೂನ್ 10 ರಂದು ಬೆಳಿಗ್ಗೆ 9 ಗಂಟೆಗೆ ಎಲೆಕ್ಟ್ರಿಶಿಯನ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್ ಆಂಡ್ ಕೋಪಾ/ಪಾಸಾ ಹಾಗೂ ಇದೇ ಜೂನ್ 11 ರಂದು ಬೆಳಿಗ್ಗೆ 9 ಗಂಟೆಗೆ ರಂದು ಫಿಟ್ಟರ್, ಟರ್ನರ್, ಮಶಿನಿಸ್ಟ್, ಎಮ್‌ಆರ್‌ಎಸಿ, ಡಿಎಮ್‌ಎಮ್, ವೆಲ್ಡರ್ ಮತ್ತು ಎಲೆಕ್ಟ್ರೋಪ್ಲೇಟರ್ ವೃತ್ತಿಗಳಿಗೆ ಕಲಬುರಗಿ ನಗರದ ಎಂ.ಎಸ್.ಕೆ.ಮಿಲ್ ರಸ್ತೆಯಲ್ಲಿರುವ ಕಲಬುರಗಿ (ಪುರುಷ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಶಿಶಿಕ್ಷು (ಅಪ್ರೆಂಟಿಶಿಫ್) ತರಬೇತಿಗಾಗಿ ಕ್ಯಾಂಪಸ್ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ (ಪುರುಷ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ದಿನಾಂಕ: 01–01–2022 ನಂತರ ಐ.ಟಿ.ಐ. ಪಾಸಾದ ಮತ್ತು ಕೊನೆಯ ವರ್ಷದಲ್ಲಿ ಅಭ್ಯಸಿಸುತ್ತಿರುವ 21 ವರ್ಷದೊಳಗಿನ (ಎಸಿ/ಎಸ್ಟಿ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಓಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿಯಲ್ಲಿ ವಿನಾಯತಿ ಇರುತ್ತದೆ) ಅಭ್ಯರ್ಥಿಗಳು ಕ್ಯಾಂಪಸ್ ಸಂದರ್ಶನಕ್ಕೆ ಹಾಜರಾಗಬೇಕು.

ಅಭ್ಯರ್ಥಿಗಳು ಮೇಲ್ಕಂಡ ದಿನದಂದು ನಡೆಯುವ ಸಂದರ್ಶನಕ್ಕೆ ತಮ್ಮ ವೈಯಕ್ತಿಕ ವಿವರ (ಬಯೋಡೆಟಾ) ಎಸ್.ಎಸ್.ಎಲ್.ಸಿ ಮತ್ತು ಐಟಿಐ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಭಾವಚಿತ್ರಗಳು, ಆಧಾರ್ ಕಾರ್ಡ್ ಹಾಗೂ ಇತರೆ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ (ಪುರುಷ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸೂಚನಾ ಫಲಕದಲ್ಲಿ ವಿವರ ನೋಡಲು ಹಾಗೂ ಸಂಸ್ಥೆಯ ಮೊಬೈಲ್ ಸಂಖ್ಯೆ 9844778565, 9481539511 ಹಾಗೂ 9740524743 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.




ಕಲಬುರಗಿ: ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ವಿರೋಧಿಸಿ, ರಸಗೊಬ್ಬರ ಕೊರತೆ ನೀಗಿಸಬೇಕು, ವಿದ್ಯುತ್ ಖಾಸಗೀಕರಣ ಹಿಂಪಡೆಯಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ನಗರದ ನೆಹರು ಗಂನ ಕೃಷಿ ಹುಟ್ಟುವಳಿ ಮಾರುಕಟ್ಟೆ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಲಾಯಿತು. ಸಂಘದ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ, ಉಪಾಧ್ಯಕ್ಷರಾದ ದೇವು ಬಿರಾದಾರ, ರೇವಣಸಿದ್ದಪ್ಪ ಪಾಟೀಲ, ಶರಣಪ್ಪ ವಚ್ಚಾ, ಸದಸ್ಯ ಭೀಮಶಾ ಬಡದಾಳ, ಸಿದ್ದು ಎಸ್ ಎಲ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಗಡಿನಾಡಿನ ಕನ್ನಡಿಗರ ಮಹಾಸಂಗಮಕ್ಕೆ ಸಕಲ ಸಿದ್ಧತೆ



ಆಳಂದ: ನಮ್ಮ ಕರ್ನಾಟಕ ಸೇನೆ ಆಶ್ರಯದಲ್ಲಿ ಪ್ರಥಮ ಗಡಿನಾಡು ಕನ್ನಡಿಗರ ಉತ್ಸವ ಜೂನ್.10ರಂದು ಭೂಸನೂರ ಸಕ್ಕರೆ ಕಾರ್ಖಾನೆ ಬಳಿಯ ನಿಲಾಂಬಿಕ ಕಲ್ಯಾಣ ಮಂಟಪದಲ್ಲಿ ಸಂಜೆ 6:00ಗಂಟೆಗೆ ಅದ್ಧೂ–ರಿಯಾಗಿ ಜರುಗಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಕನ್ನಡಾಭಿಮಾನಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ರಮೇಶ ಜಿ. ಜಗತಿ ಅವರು ಮನವಿ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿಯಲ್ಲಿ ಉತ್ಸವ ಕುರಿತು ಪ್ರಚಾರ ಪೋಸ್ಟರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಉತ್ಸವ ಸಮಾರಂಭವು ಆಗಮಿಸುವ ನಾಡಿನ ವಿವಿಧ ಮಠಾಧೀಶರ ಮೂಲಕ ಸಾಮೂಹಿಕವಾಗಿ ಜ್ಯೋತಿ ಬೆಳಗಿಸುವರು.

ಶಾಸಕ ಬಿ.ಆರ್. ಪಾಟೀಲ ಅವರು ನಾಡದೇವಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವರು. ಮಾಜಿ ಶಾಸಕ ಸುಭಾಷ ಗುತ್ತೇದಾರ ಸಮಾರಂಭವನ್ನು ಉದ್ಘಾಟನೆ ನೆರವೇರಿಸಲಿದ್ದಾರೆ. ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಎಂ. ಬಸವರಾಜ ಪಡಕೋಟಿ ಅಧ್ಯಕ್ಷತೆ ವಹಿಸುವರು.

ಕೃಷಿಕ ಸಮಾಜ ಅಧ್ಯಕ್ಷ ಗುರುಶರಣ ಪಾಟೀಲ ಕೊರಳ್ಳಿ ಮತ್ತು ಪಿಕೆಪಿಎಸ್ ಅಧ್ಯಕ್ಷ ಬಾಬುರಾವ್ ಪಾಟೀಲ, ಧರ್ಮರಾಜ ಸಾಹು, ಜಿಪಂ ಮಾಜಿ ಸದಸ್ಯ ಹರ್ಷಾನಂದ ಗುತ್ತೇದಾರ, ಉದ್ಯಮಿ ಸಂತೋಷ ಗುತ್ತೇದಾರ ಸೇರಿದಂತೆ ಅನೇಕರು ಸಸಿಗೆ ನೀರುಣಿಸುವರು.

ಚಿತ್ರನಟ ಗಣೇಶರಾವ್ ಕೇಸರ್ಕರ, ಜಿಪಂ ಮಾಜಿ ಅಧ್ಯಕ್ಷ ನಿತೀನ ವಿ. ಗುತ್ತೇದಾರ, ಗ್ರಾಮೀಣ ಶಾಸಕ ಬಸವರಾಜ ಮುತ್ತಿಮುಡ್, ಬಿಜೆಪಿ ಮುಖಂಡ ಚಂದು ಪಾಟೀಲ ಉಪಸ್ಥಿತರಿರುವರು. ವೇದಿಕೆಯಲ್ಲಿ ಬುದ್ಧ, ಬಸವ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಜಿ ಶಾಸಕ ಅಪ್ಪುಗೌಡ ಪಾಟೀಲ,ಜಿಪಂ ಮಾಜಿ ಸದಸ್ಯ ವೀರಣ್ಣಾ ಮಂಗಾಣೆ ಮತ್ತು ಗ್ರಾಪಂ ಅಧ್ಯಕ್ಷ ಮುತ್ತಣ್ಣಾ ಬೀಳಗಿ ಪೂಜೆ ನೆರವೇರಿಸುವರು.

ಈ ಸಮಾರಂಭದಲ್ಲಿ ತಾಲೂಕು ಹಾಗೂ ಜಿಲ್ಲೆಯ ರಾಜಕೀಯ ಮುಖಂಡರು, ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಮತ್ತು ಕನ್ನಡಾಭಿಮಾನಿಗಳು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ನಂತರ ಸಾಂಸ್ಕೃತಿ ಹಾಗೂ ಸಂಗೀತ ಕಾರ್ಯಕ್ರಮ ನಡೆಯಲಿದ್ದು,

ಈ ಸಂದರ್ಭದಲ್ಲಿ ಸೇನೆಯ ಸಾಮಾಜಿಕ ಜಾಲತಾಣದ ರಾಜ್ಯ ಉಪಾಧ್ಯಕ್ಷ ಶರಣು ವಿ. ಮುನ್ನೊಳ್ಳಿ, ಜಿಲ್ಲಾಧ್ಯಕ್ಷ ಪುನೀತರಾಜ ಕವಡೆ, ಸೇನೆಯ ವಾಹನ

# ವಾಡಿ: ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ



ವಾಡಿ:ಪಟ್ಟಣದ ಪುರಸಭೆ ವ್ಯಾಪ್ತಿಯ ಹಲವು ಬಡಾವಣೆಗಳು ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದೆ ನರಳುತ್ತಿದ್ದು, ಕೂಡಲೇ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿ ಜನಧ್ವನಿ ಜಾಗೃತ ಸಮಿತಿಯ ಸದಸ್ಯರು ಪುರಸಭೆ ಮುಖ್ಯಾಧಿಕಾರಿಗಳಿಗೆ ಶನಿವಾರ ಮನವಿಪತ್ರ ಸಲ್ಲಿಸಿದರು.

ಸಮಿತಿಯ ಪದಾಧಿಕಾರಿಗಳು ಪುರಸಭೆ ಮುಖ್ಯಾಧಿಕಾರಿ ಮನೋಜ–ಕುಮಾರ ಗುರಿಕಾರ ಅವರನ್ನು ಭೇಟಿಯಾಗಿ ಪಟ್ಟಣದ ವಿವಿಧ ಬಡಾವಣೆಗಳು ಎದು–ರಿಸುತ್ತಿರುವ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟರು.ಮಲತಾಯಿ ಧೋರಣೆ: ಸಮಿತಿ ಅಧ್ಯಕ್ಷರ ಆಕ್ರೋಶ

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ವೀರಭದ್ರಪ್ಪ ಆರ್.ಕೆ ಅವರು, "ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಪಾವತಿಸಿದ ತೆರಿಗೆ ಹಣದಿಂದಲೇ ಜನರಿಗಾಗಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಆದರೂ ವಾಡಿ ಪಟ್ಟಣದ ವಿವಿಧ ಬಡಾವಣೆಗಳ ಜನರು ಕನಿಷ್ಠ ಸೌಲಭ್ಯಗಳಿಂದಲೂ ವಂಚಿತಗೊಂಡಿರುವುದು ಖೇದಕರ," ಎಂದರು.

"ಈಗಾಗಲೇ ಮಳೆಗಾಲ ಪ್ರಾರಂಭವಾಗಿದ್ದು, ಪಟ್ಟಣದ ಕೆಲವು ಬಡಾವಣೆಗಳಲ್ಲಿನ ಚರಂಡಿಗಳು ಹೂಳು ತುಂಬಿ ಗಬ್ಬು ನಾರುತ್ತಿವೆ. ನೈರ್ಮಲ್ಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಜನರು ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿ ಬದುಕುತ್ತಿದ್ದಾರೆ. ಅದರಲ್ಲೂ ಬಸವನಗರ ಬಡಾವಣೆಯಂತೂ ಶೂನ್ಯ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಬೀದಿ ದೀಪಗಳನ್ನು ಒದಗಿಸದೆ ಪುರಸಭೆಯು ಬಡಾವಣೆಗಳ ವಿರುದ್ಧ ಮಲತಾಯಿ ಧೋರಣೆ ಅನುಸ–ರಿಸುತ್ತಿದೆ. ತಕ್ಷಣವೇ ಜನರ ಬೇಡಿಕೆಗಳಿಗೆ ಸ್ಪಂದಿಸಬೇಕು," ಎಂದು ಅವರು ಒತ್ತಾಯಿಸಿದರು.ಸಮಿತಿಯ ಪ್ರಮುಖ ಬೇಡಿಕೆಗಳು: ಚರಂಡಿ ಹೂಳೆತ್ತುವುದು: ವಾಡಿ ಪಟ್ಟಣದ ಪ್ರತಿ ಬಡಾವಣೆಯ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತಕ್ಷಣವೇ ತೆರವುಗೊಳಿಸಬೇಕು.

ರೋಗ ನಿಯಂತ್ರಣ: ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಯಲು ಪಟ್ಟಣದಾದ್ಯಂತ ಫಾಗಿಂಗ್ ಮಾಡಿಸಬೇಕು ಮತ್ತು ಬ್ಲೀಚಿಂಗ್ ಪೌಡರ್ ಸಿಂಪಡಿಸಬೇಕು.

ಬೀದಿ ದೀಪಗಳ ಅಳವಡಿಕೆ: ಕತ್ತಲಲ್ಲಿ ಮುಳುಗಿರುವ ವಿವಿಧ ಬಡಾವಣೆಗಳಲ್ಲಿ ತಕ್ಷಣವೇ ಬೀದಿ ದೀಪಗಳನ್ನು ಅಳವಡಿಸಬೇಕು.

ಶುದ್ಧ ಕುಡಿಯುವ ನೀರು: ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಕಡ್ಡಾಯವಾಗಿ ಶುದ್ಧೀಕರಿಸಿ ಪೂರೈಸಬೇಕು.

ಈ ಸಂದರ್ಭದಲ್ಲಿ ಜನಧ್ವನಿ ಜಾಗೃತ ಸಮಿತಿಯ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪ ಆರ್.ಕೆ, ಉಪಾಧ್ಯಕ್ಷರಾದ ಶ್ರೀ ಸಿದ್ದಯ್ಯ ಶಾಸ್ತ್ರಿ ನಂದೂರಮಠ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಶೇಖ್ ಅಲ್ಲಾಭಕ್ಷ್, ಎಂ. ಡಿ ಯುಸೂಫ್ ಮುಲ್ಲಾ,ಆರ್ ಎನ್ ಆನಂದ, ವಿಠ್ಠಲ ರಾಠೋಡ, ಈರಣ್ಣ ಯಲಗಟ್ಟಿ, ಸುರೇಶ ಪಾಟೇಕರ, ಸೇ–ರಿದಂತೆ ಸಮಿತಿಯ ಪ್ರಮುಖ ಸದಸ್ಯರು ಉಪಸ್ಥಿತರಿದ್ದರು.

# ಚೌಡಾಪುರ:ಇಂಗ್ಲೀಷ್ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಕಲಬುರಗಿ: 2026–27ನೇ ಶೈಕ್ಷಣಿಕ ಸಾಲಿಗೆ ಅಫಜಲಪುರ ತಾಲೂಕಿನ ಚೌಡಾಪುರ ಕಿತ್ತೂರು ರಾಣಿ ಚೆನ್ನಮ್ಮ ಅಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ಖಾಲಿಯಿರುವ ಇಂಗ್ಲೀಷ್ ಅತಿಥಿ ಶಿಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಫಜಲಪುರ ತಾಲೂಕಿನ ಚೌಡಾಪುರ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

ಈ ಅತಿಥಿ ಶಿಕ್ಷಕರ ಹುದ್ದೆಯು ತಾತ್ಕಾಲಿಕವಾಗಿದ್ದು, ಆಯ್ಕೆಯಾದ ಅಭ್ಯರ್ಥಿಗೆ ಮಾಸಿಕ 16,650 ರೂ. ಗೌರವಧನ ನೀಡಲಾಗುತ್ತದೆ. ಕ್ರೈಸ್ (ಏಖಇಖಖ) ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು 2026ರ ಜೂನ್ 12ರ ರೊಳಗಾಗಿ ಅಫಜಲಪುರ ತಾಲೂಕಿನ ಚೌಡಾಪುರ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಪ್ರಾಂಶುಪಾಲರಿಗೆ ಅರ್ಜಿಯನ್ನು ಸಲ್ಲಿಸಬೇಕು.

ಷರತ್ತು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಅಫಜಲಪುರ ತಾಲೂಕಿನ ಚೌಡಾಪುರ ಕಿತ್ತೂರು ರಾಣಿ ಚೆನ್ನಮ್ಮ ಅಂಗ್ಲ ಮಾಧ್ಯಮ ವಸತಿ ಶಾಲೆಯನ್ನು ಹಾಗೂ ಮೊಬೈಲ್ ಸಂಖ್ಯೆ 9449775544ಗೆ ಸಂಪರ್ಕಿಸಲು ಕೋರಲಾಗಿದೆ.

# ಐಎಫ್ಎಸ್‌ಸಿ ಸಾಧಕ ಬಸವರಾಜ ಕೆಂಪವಾಡರಿಗೆ ಸನ್ಮಾನ



**ಉದಯರಶ್ಮಿ ದಿನಪತ್ರಿಕೆ**

ಅಥಣಿ: ದೇಶದ ಅತ್ಯಂತ ಕಠಿಣ ಪರೀಕ್ಷೆಗಳಲ್ಲಿ ಒಂದಾದ ಐಎಫ್‌ಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದ ಅಥಣಿ ತಾಲೂಕಿನ ಸವದಿ ಗ್ರಾಮದ ಬಸವರಾಜ ಕೆಂಪವಾಡ ಅವರನ್ನು ತಾಲೂಕಾ ಆಡಳಿತದ ವತಿಯಿಂದ ಸೋಮವಾರ ಸನ್ಮಾನಿಸಿ ಸತ್ಕರಿಸಲಾಯಿತು.

ಅಥಣಿ ತಹಶೀಲ್ದಾರ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ತಾಲೂಕಾ ದಂಡಾಧಿಕಾರಿ ಹಾಗೂ ತಹಶೀಲ್ದಾರ ಸಿದರಾಯ ಬೋಸಗಿ ಹಾಗೂ ತಾಲೂಕಿನ ಎಲ್ಲ ಅಧಿಕಾರಿಗಳು ಸೇರಿ ಬಸವರಾಜ ಕೆಂಪವಾಡ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಈ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಬಸವರಾಜ ಕೆಂಪವಾಡ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ಸಿಕ್ಕರೆ ಯುಪಿಎಸ್‌ಸಿ ಐಎಫ್‌ಎಸ್‌ಸಿ ಅಂತಹ ಪರೀಕ್ಷೆಗಳನ್ನು ಪಾಸ ಮಾಡುವುದು ಕಷ್ಟವಲ್ಲ ನನ್ನ ಯಶಸ್ಸಿಗೆ ನನ್ನ ತಂದೆ ತಾಯಿ ಗುರುಗಳು ಮತ್ತು ಅಥಣಿ ತಾಲೂಕಿನ ಜನರ ಆಶೀರ್ವಾದವೇ ಕಾರಣ ಸಾದ್ಯವಾದಷ್ಟು ಸಮಜಾಜಕ್ಕೆ ಒಳ್ಳೆದೆ ಮಾಡುವೆ ನಿಮ್ಮಂತ ಎಲ್ಲ ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಪಡೆದು ಮುಂದೆ ಅರಣ್ಯ ಇಲಾಖೆಯಲ್ಲಿ ಒಳ್ಳೆಯ ಸೇವೆ ಸಲ್ಲಿಸುವ ಮೂಲಕ ಪರಿಸರ ಸಂರಕ್ಷಣೆಗೆ ನನ್ನ ಕೊಡುಗೆ ನೀಡುವೆ ಎಂದು ಹೇಳಿದರು.

ತಹಶೀಲ್ದಾರಸಿದರಾಯಬೋಸಗಿಮಾತನಾಡಿ, ಬಸವರಾಜ ಕೆಂಪವಾಡ ಅವರು ಐಎಫ್‌ಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು ಇಡಿ ಅಥಣಿ ತಾಲೂಕಿಗೆ ಹಾಗೂ ಸವದಿ ಗ್ರಾಮಕ್ಕೆ ಹೆಮ್ಮೆಯ ವಿಷಯ ಅವರ ಸಾಧನೆ ಇತರ ವಿದ್ಯಾರ್ಥಿಗಳಿಗೆ ಸ್ಪೂರ್ತಿಯಾಗಲಿ ಕಠಿಣ ಪರಿಶ್ರಮ ಛಲ ಇದ್ದರೆ ಯಾವುದೇ ಗುರಿ ಮುಟ್ಟಲು ಸಾಧ್ಯ ಎಂಬುದನ್ನು ಬಸವರಾಜ ಕೆಂಪವಾಡ ಅವರು ತೋರಿಸಿ ಕೊಟ್ಟಿದ್ದಾರೆ ತಾಲೂಕಾ ಆಡಳಿತದಿಂದ ಪರವಾಗಿ ಅವರಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸಿಪಿಐ ಸಂತೋಷ ಹಳ್ಳೂರ, ತಾಲೂಕಾ ಪಂಚಾಯತ ಕಾರ್ಯನಿರ್ವಾಹ ಶಿವಾನಂದ ಕಲ್ಲಾಪೂರ, ಗ್ರೇಡ್ 2 ತಹಶಿಲ್ದಾರರಾದ ಬಸವರಾಜ ಹೊಸಕೇರಿ, ಮಹಾದೇವ ಬಿರಾದರ, ವಲಯ ಅರಣ್ಯಾಧಿಕಾರಿ ರಾಕೇಶ ಅರ್ಜುನವಾಡ, ಕೃಷಿ ಇಲಾಖೆಯ ನಿಂಗನಗೌಡ ಬಿರಾದರ, ದರೇಪ್ಪ ಕೆಂಪವಾಡ, ಕಂದಾಯ ಇಲಾಖೆ ಸಿಬ್ಬಂದಿ, ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಗುರುಗಳ ಋಣ ತೀರಿಸುವುದು ಅಸಾಧ್ಯ : ವಾಲಿಕಾರ




**ಉದಯರಶ್ಮಿ ದಿನಪತ್ರಿಕೆ**

ದೇವರಹಿಪ್ಪರಗಿ: ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ. ಗುರುವಿನ ಉಪಕಾರ ಅಪಾರ. ಶಿಕ್ಷಕರು ಸಚ್ಚಾರಿತ್ರ ಸಮಾಜದ ನಿರ್ಮಾತೃಗಳು. ತಮ್ಮಲ್ಲಿರುವ ಜ್ಞಾನವನ್ನು ಮಕ್ಕಳಿಗೆ ಬೋಧಿಸಿ ಅವರ ಬದುಕನ್ನು ಕಟ್ಟಿಕೊಟ್ಟ ಶಿಕ್ಷಕರ ಸೇವೆ ಶ್ಲಾಘನೀಯ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಅಭಿಪ್ರಾಯ ಪಟ್ಟರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ದೇವರಹಿಪ್ಪರಗಿ ಹಾಗೂ ತಾಲೂಕ ಕನ್ನಡ ಸಾಹಿತ್ಯ ಪರಿಷತ್ ದೇವರಹಿಪ್ಪರಗಿ ಇವರ ಆಶ್ರದಲ್ಲಿ ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಶಿಕ್ಷಕ ಸ್ಥಾನ ಪವಿತ್ರವಾದದ್ದು. ಹಗಲಿರುಳು ಅಧ್ಯಯನ ಮಾಡಿ ಮಕ್ಕಳಿಗೆ ಜ್ಞಾನವಂತರನ್ನಾಗಿ ಮಾಡಿ ಭವಿಷ್ಯ ರೂಪಿಸುವ ಮೂಲಕ ಶಿಕ್ಷಕರು ಸ್ಮರಣೀಯ ಸಾಲಿನಲ್ಲಿ ಇದ್ದಾರೆ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಜಿ.ಎಸ್.ಬೇವನೂರು ಮಾತನಾಡಿ, ನಿವೃತ್ತಿ ಜೀವನದಲ್ಲಿ ಸಾಮಾಜಿಕ. ಶೈಕ್ಷಣಿಕ ಹಾಗೂ ಅಧ್ಯಾತ್ಮಿಕ ಜೀವನಕ್ಕೆ ಮಹತ್ವ ನೀಡಬೇಕು. ಜೀವನ ಪೂರ್ತಿ ಬೋಧಿಸಿದ ತಾವು ಈಗ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಲಹೆ, ಮಾರ್ಗದರ್ಶನ ನೀಡಬೇಕೆಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ಅಧ್ಯಕ್ಷ ಎ.ಎಚ್.ವಾಲಿಕಾರ ಮಾತನಾಡಿ, ನಿವೃತ್ತ ಶಿಕ್ಷಕರಾದ ತಮಗೆ ಸನ್ಮಾನ ಮಾಡುವ ಅವಕಾಶ ದೊರಕಿರುವದು ನಮ್ಮೆಲ್ಲರ ಅದೃಷ್ಟ. ಯಾವುದೇ ಬೇದವಿಲ್ಲದೆ ಮಾನವೀಯ ಸದ್ಗುಣಗಳಿಂದ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರಿಗೆ ಜ್ಞಾನ ದಾಸೋಹ ಮಾಡಿದ ಕೀರ್ತಿ ತಮಗೆ ಸಲ್ಲುತ್ತದೆ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಸಿ.ತಳಕೇರಿ. ಡಾ.ಬಿ.ಆರ್. ಅಂಬೇಡ್ಕರ ಸುಧಾರಣಾ ಸಮಿತಿ ಅಧ್ಯಕ್ಷ ಕಾಶಿನಾಥ ತಳಕೇರಿ. ತತ್ವಪದ ಗಾಯಕ ಮಹೆತಾಬ ಕಾಗವಾಡ. ಶಿಕ್ಷಣ ಸಂಯೋಜಕ ಎಸ್.ಆಯ್.ರಾಂಪೂರ ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಿದ್ದು ಮೇಲಿನಮನಿ ಮಾತನಾಡಿದರು

ಎಮ್.ಎಚ್.ಪಟೇಲ. ಎಸ್.ಜಿ.ತಾವರಖೇಡ. ಕೆ. ಎಂ.ನಂದಿ. ಲಕ್ಷ್ಮಣ ಸೋನ್ನದ. ಸಿಂಗೆ ವೇದಿಕೆಯಲ್ಲಿದ್ದರು.

ನಿವೃತ್ತಶಿಕ್ಷಕರಾದ ಎಸ್.ಎ.ಬಾಗವಾನ (ಮಣೂರ), ರಾಮಚಂದ್ರ ನಾಯಕ(ಮಣೂರ), ಎಲ್.ವಾಯ್.ಹರಿಜನ( ದೇವೂರ ಎಲ್.ಟಿ), ಪರಶುರಾಮ ಬೆನಕನಹಳ್ಳಿ (ದೇವರ ಎಲ್.ಟಿ) ಡಿ.ಎ.ಇನಾಮದಾರ(ಜಾಲವಾದ), ಎಸ್.ಎಮ್.ಬಿರಾದಾರ (ಕೋರವಾರ), ಅಡಿವೆಪ್ಪ ಮೇಟಿ (ದೇವೂರ ಎಲ್.ಟಿ), ಶಬ್ಬೀರಅಹಮ್ಮದ ಮನಿಯಾರ(ಕೊಂಡಗೂಳಿ), ಶಿವನಗೌಡ ಪಾಟೀಲ (ಬೂದಿಹಾಳಡೋಣಿ). ಶ್ರೀಶೈಲ ಯಾಳವಾರ(ಬೋಮ್ಮನಜೋಗಿ). ಅಶೋಕ ಚಂಡಕಿ (ಚಿಕ್ಕರೂಗಿ), ಎಮ್.ಎಸ್.ಮಠಪತಿ (ಹರನಾಳ), ಸಲೀಮ್ ಕಾಟಿಕ(ಕೊಂಡಗೂಳಿ ), ಅಮೃತಾಬಾಯಿ ಕರಾಬಿ (ಪಡಗಾನೂರ),ಗುರಪ್ಪ ಹೊಕ್ಕುಂಡಿ (ತಿಳಗೋಳ ),ಜಾನಪ್ಪ ಹರಿಜನ(ಪಡಗಾನೂರ ),ಮಲಕಪ್ಪ ಹಚಡದ (ಚಿಕ್ಕರೂಗಿ), ಬಿ.ಡಿ.ಪಾಟೀಲ( ಬೊಮ್ಮನಜೋಗಿ), ಎ.ಎಮ್. ಚೌಧರಿ(ಬೊಮ್ಮನಜೋಗಿ), ಗುರುಬಸಪ್ಪ ಕೆಂಬಾವಿ(ಗಂಗನಳ್ಳಿ) ಇವರುಗಳನ್ನು ಸನ್ಮಾನಿಸಲಾಯಿತು.

ಶಿಕ್ಷಕರಾದ ಆರ್.ಎಂ.ಕುಲಕರ್ಣಿ. ಎಸ್.ವಿ. ಕೋಟೀನ್. ಶಿವಶರಣ ಪೂಜಾರಿ, ಎನ್.ಎಸ್.ಹಿರೇಮಠ, ಬಿ.ಜಿ.ಪಾಟೀಲ. ವೈ..ಜಿ.ತಾವರಖೇಡ, ಪ್ರಹ್ಲಾದ ಕುಲಕರ್ಣಿ, ಬಿ.ಜಿ.ಬಡಿಗೇರ. ಎನ್.ಎಸ್. ಹರವಾಳ ರವೀಂದ್ರ ಕೋಟಿನ್, ಮಲ್ಲಿಕಾರ್ಜುನ ತಳಕೇರಿ. ಬಸವರಾಜ ನಾಗರಾಳ, ಅಣ್ಣಾರಾಯ ಬಜಂತ್ರಿ, ಎಸ್.ಡಿ.ಮುಳಸಾವಳಗಿ. ದಾನು ರಾಠೋಡ. ಎಮ್ ಹಳ್ಳಿ. ಎಮ್.ಜಿ.ಯಂಕಂಚಿ, ರೇಣುಕಾ ಇಂಡಿ, ಪುಷ್ಪಾವತಿ ರೂಗಿ ಗೋಲ್ಲಾಳ ಬಿರಾದಾರ ಇದ್ದರು.

# ಸಾದನೆಗಳು ಸಾಧಕರ ಸ್ವತ್ತು ವಿನಃ ಸೋಮಾರಿಗಳದ್ದಲ್ಲ : ಹಂಗರಗಿ

**ಉದಯರಶ್ಮಿ ದಿನಪತ್ರಿಕೆ**



ಸಿಂದಗಿ: ವಿದ್ಯಾರ್ಥಿಗಳು ಸಾಧನೆಗಳ ಮೆಟ್ಟಿಲೇರಬೇಕಾದರೆ ಗುರುಗಳ ಮಾರ್ಗದರ್ಶನದಲ್ಲಿ ಶ್ರದ್ಧಾಭಕ್ತಿಯಿಂದ ವಿದ್ಯೆಯಲ್ಲಿ ತಲ್ಲಿನವಾದರೆ ಮಾತ್ರ ಗುರಿ ಮುಟ್ಟಲು ಸಾಧ್ಯ. ಈ ರೀತಿಯಲ್ಲಿ ಹೆಚ್ಚಿನ ಅಂಕ ಪಡೆದು ವಿದ್ಯಾರ್ಥಿಗಳು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಂ.ಎಂ.ಹಂಗರಗಿ ಹೇಳಿದರು.

ಸಿಂದಗಿ ತಾಲೂಕಿನ ಯರಗಲ್ಲ ಗ್ರಾಮದ ಶ್ರೀ ಸಿದ್ದ ಶಂಕರಾನಂದ ಸ್ವಾಮೀಜಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ನಗದು ರೂಪದಲ್ಲಿ ಪ್ರೋತ್ಸಾಹಧನ ನೀಡಿ ಮಾತನಾಡಿದ ಅವರು, ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಮುಂದಿನ ಶಿಕ್ಷಣದಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿ ಗ್ರಾಮದ ಹೆಸರು ಹಾಗೂ ಸಂಸ್ಥೆ ಹೆಸರು ತರುವುದರ ಜೊತೆಗೆ ತಂದೆ–ತಾಯಿಗಳ ಕನಸನ್ನು ನನಸು ಮಾಡಬೇಕು. ನಿಮ್ಮ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮದು, ಕಲಾವತಿ, ಪ್ರಿಯಾಂಕಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಸ್ಥೆ ಆಡಳಿತ ಸದಸ್ಯರಾದ ಎಲ್.ವಿ.ಕುಲಕರ್ಣಿ. ಭೀಮಣ್ಣ ಹೇರೂರ, ಅಲ್ಲಿಸಾಬ ಬಂಕಲಗಿ, ಡಾ.ಸಂಗು ಅಗಸರ, ಶಾಂತು ಮರಡಿ, ಗುರುರಾಜ ಕುಲಕರ್ಣಿ, ಕಾಳಪ್ಪ ಅಗಸರ, ರಾಮಣ್ಣ ಬಲುಂಡಗಿ, ಮುಖ್ಯಗುರು ಅರುಣ ನಾಯ್ಕೋಡಿ, ದಾನಮ್ಮ ಶಿಂಪಿ, ರಾಜು ಯಡ್ರಾಮಿ, ಅಶ್ವಿನಿ ಲಮಾಣಿ ಸೇರಿದಂತೆ ಪಾಲಕರು ಇದ್ದರು

# ಜೂ.28 ರಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ

**ಉದಯರಶ್ಮಿ ದಿನಪತ್ರಿಕೆ**

ಬೆಂಗಳೂರು: ರಾಜ್ಯದಲ್ಲಿ 0 ಇಂದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ 2026 ರ ಜೂನ್ 28 ರ ಭಾನುವಾರದಂದು 'ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೋ)' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ರಿತ್ವಿಕ್ ಪಾಂಡೆ ಅವರು ತಿಳಿಸಿದ್ದಾರೆ.

ಭಾರತವು ಕಳೆದ 14 ವರ್ಷಗಳಿಗೂ ಮೇಲ್ಪಟ್ಟು ಪೋಲಿಯೊ ಮುಕ್ತ ರಾಷ್ಟವಾಗಿದ್ದರೂ, ಜಗತ್ತಿನ ಕೆಲವು ಭಾಗಗಳಲ್ಲಿ ಹಾಗೂ ಭಾರತದ ನೆರೆ ರಾಷ್ಟ್ರಗಳಲ್ಲಿ ವೈಲ್ಡ್ ಪೋಲಿಯೋ ವೈರಸ್ (Wild Polio Virus) ಹರಡುವಿಕೆ ಇನ್ನೂ ಇರುವುದರಿಂದ ಈ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ. ಭಾರತ ತಜ್ಞ ಸಲಹಾ ಗುಂಪಿನ ಶಿಫಾರಸ್ಸಿನ ಅನ್ವಯ ಈ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೊದಲನೇ ದಿನ ಜೂನ್ 28 ರಂದು ಪೋಲಿಯೋ ಬೂಗಳಲ್ಲಿ ಲಸಿಕೆ ನೀಡಲಾಗುವುದು. ನಂತರದ 2 ರಿಂದ 3 ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಲಸಿಕೆ ವಂಚಿತ ಮಕ್ಕಳಿಗೆ ಲಸಿಕೆ ಹಾಕಲಿದ್ದಾರೆ. ವಲಸಿಗ ಸಮುದಾಯದ ಮಕ್ಕಳು, ಹೆಚ್ಚು ಅಪಾಯದಂಚಿನಲ್ಲಿರುವ ಪ್ರದೇಶಗಳು ಹಾಗೂ ನಗರ ಪ್ರದೇಶದ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ವಿಶೇಷ ಆದ್ಯತೆ ನೀಡಲಾಗುತ್ತದೆ.

## ಎಲ್ಲಾ ಇಲಾಖೆಗಳ ಸಹಕಾರಕ್ಕೆ ಮನವಿ:

**ಈ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಇಲಾಖೆಗಳ ಸಹಕಾರವನ್ನು ಬಯಸಿರುವ ಆರೋಗ್ಯ ಇಲಾಖೆಯು, ಹೆಚ್ಚಿನ ಪ್ರಚಾರ ನೀಡಲು ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು, ಎಲ್ಲಾ ಮಾಧ್ಯಮಗಳು, ಆಕಾಶವಾಣಿ ಹಾಗೂ ಎಫ್.ಎಮ್ ವಾಹಿನಿಗಳಲ್ಲಿ ಜಿಂಗಲ್ಸ್ ಮೂಲಕ ಈ ಅಭಿಯಾನದ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ನಿರ್ದೇಶನ ನೀಡಲಾಗಿದೆ.**

**ಸಾರ್ವಜನಿಕರು ಹಾಗೂ ಪೋಷಕರು ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿಗಳನ್ನು ಹಾಕಿಸಿ ಸಹಕರಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.**

# ಬಸವಾದಿ ಶರಣರ ಹಿಂದೂ ಸಮಾವೇಶ ಬಹಿಷ್ಕರಿಸಲು ಡಾ.ಪಟ್ಟಣ ಕರೆ

**ಉದಯರಶ್ಮಿ ದಿನಪತ್ರಿಕೆ**

ಸಮಾಜದಲ್ಲಿ ಅಶಾಂತಿ ದ್ವೇಷ ಮತ್ಸರ ಬಿತ್ತುವ ಕನ್ನೇರಿ ಮಠದ ಅದೃಶ್ಯ ಶ್ರೀ ಕಾಡ ಸಿದ್ದೇಶ್ವರ ಶ್ರೀಗಳು 28 ಜೂನ್ 2026 ರಂದು ಮಹಾಮಾನವತಾವಾದಿ ವಿಶ್ವ ಗುರು ಬಸವಣ್ಣನವರ ಕರ್ಮ ಭೂಮಿ ಬಸವ ಕಲ್ಯಾಣದಲ್ಲಿ ಆಯೋಜಿಸಿರುವ ಬಸವಾದಿ ಶರಣರ ಹಿಂದೂ ಸಮಾವೇಶವನ್ನು ಕರ್ನಾಟಕ ರಾಜ್ಯ ಸರ್ಕಾರ ನಿಷೇಧಿಸ ಬೇಕು ಎಂದು ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಸವ ಭಕ್ತರ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ ಕನ್ನೇರಿ ಮಠದ ಅದೃಶ್ಯ ಶ್ರೀ ಕಾಡ ಸಿದ್ದೇಶ್ವರ ಶ್ರೀಗಳು ಸಮಾಜದಲ್ಲಿ ಗೊಂದಲ ನಿರ್ಮಿಸುತ್ತಿದ್ದಾರೆ. ಅವರು ಬಳಸುವ ಅಸಂವಿಧಾನ ಪದಗಳನ್ನು ಸುಪ್ರೀಂ ಕೋರ್ಟ್ ಕೂಡ ಛೀಮಾರಿ ಹಾಕಿದೆ. ಕನ್ನೇರಿ ಮಠದ ಅದೃಶ್ಯ ಶ್ರೀ ಕಾಡ ಸಿದ್ದೇಶ್ವರ ಶ್ರೀಗಳು ಬಸವಣ್ಣನವರ ಅವೈದಿಕ ಹಿಂದುಯೇತರ ಚಿಂತನೆಗಳನ್ನು ಮರೆ ಮಾಚಿ ವೈದಿಕ ಸನಾತನ ಧರ್ಮದ ಒಂದು ಭಾಗವೇ ಲಿಂಗಾಯತ ಧರ್ಮ ಎಂದು ಪ್ರತಿಪಾದಿಸಿ

ಬಸವ ಭಕ್ತರ ಭಾವನೆಗಳಿಗೆ ಧಕ್ಕೆ ನೋವು ಉಂಟು ಮಾಡುತ್ತಿದ್ದಾರೆ. ಅತ್ಯಂತ ಅಶ್ಲೀಲ ಪದಗಳನ್ನು ಉಪಯೋಗಿಸುವ ಕನ್ನೇರಿ ಮಠದ ಅದೃಶ್ಯ ಶ್ರೀ ಕಾಡ ಸಿದ್ದೇಶ್ವರ ಶ್ರೀಗಳು ಅದನ್ನೇ ಬಂಡವಾಳ ಮಾಡಿಕೊಂಡು ಹಿಂಸೆ ಪ್ರಚೋದನೆ ಮಾಡುವ

ಭಾಷಣ ಮಾಡುತ್ತಿದ್ದಾರೆ. ಕಾರಣ ಕರ್ನಾಟಕ ರಾಜ್ಯ ಸರ್ಕಾರ ಕನ್ನೇರಿ ಮಠದ ಅದೃಶ್ಯ ಶ್ರೀ ಕಾಡ ಸಿದ್ದೇಶ್ವರ ಶ್ರೀಗಳ ಬಸವ ಕಲ್ಯಾಣ ಪ್ರವೇಶವನ್ನು ನಿರ್ಬಂಧಿಸಬೇಕು ಎಂದು ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಇದರ ಅಧ್ಯಕ್ಷ ಡಾ ಶಶಿಕಾಂತ ಪಟ್ಟಣ ಇವರು ಸರಕಾರವನ್ನು ಆಗ್ರಹಿಸಿದ್ದಾರೆ.

ಇದರ ಜೊತೆಗೆ ಬಸವಾದಿ ಶರಣರ ಹಿಂದೂ ಸಮಾವೇಶ ಬಹಿಷ್ಕರಿಸುವ ಹಿನ್ನೆಲೆಯಲ್ಲಿ ದಿನಾಂಕ 27 ಮತ್ತು 28 ಜೂನ್ ರಂದು ಬಸವ ಕಲ್ಯಾಣ ಮತ್ತು ಬೀದರ ನಗರವನ್ನು ಬಸವ ಪರ ಸಂಘಟನೆಗಳು ಸಂಪೂರ್ಣ ಬಂದ್ ಮಾಡಿ ಬಸವಾದಿ ಶರಣರ ಹಿಂದೂ ಸಮಾವೇಶವನ್ನು ವಿಫಲಗೊಳಿಸಬೇಕು. ಕನ್ನೇರಿ ಮಠದ ಅದೃಶ್ಯ ಶ್ರೀ ಕಾಡ ಸಿದ್ದೇಶ್ವರ ಶ್ರೀಗಳು ತಮಗೆ ಬೇಕಿದ್ದರೆ ಹಿಂದೂ ಸಮಾವೇಶ ನಡೆಸಿ ತಮ್ಮ ಧರ್ಮ ಸಿದ್ಧಾಂತದ ಬಗ್ಗೆ ಚರ್ಚೆ ಸಭೆ ನಡೆಸಲಿ. ಅದನ್ನು ಬಿಟ್ಟು ಬಸವಾದಿ ಶರಣರ ಹಿಂದೂ ಸಮಾವೇಶ ಮಾಡುವುದಕ್ಕೆ ನಮ್ಮೆಲ್ಲರ ವಿರೋಧವಿದೆಯೆಂದು ಸ್ಪಷ್ಟ ಪಡಿಸಿದರು.



ಪ್ರೊ ಶಾರದಮ್ಮ ಪಾಟಿಲ ಬಾದಾಮಿ, ಡಾ ಜಯಶ್ರೀ ಪಟ್ಟಣ, ಡಾ ಸರಸ್ವತಿ ಪಾಟೀಲ, ಸುಧಾ ಪಾಟೀಲ, ಅಕ್ಕ ಮಹಾದೇವಿ ತೆಗ್ಗಿ, ರತ್ನಕ್ಕ ಬಿರಾದಾರ, ಸಿದ್ದಪ್ಪ ಪಡನಾಡ, ಡಾ ಶಾರದಾಮಣಿ ಹಂನಶಾಳ, ವಿಜಂಾಲಕ್ಷ್ಮಿ ಹಂಗರಗಿ, ಗೌರಮ್ಮ ನಾಶಿ, ಪ್ರೊ ಪ್ರೇಮಕ್ಕ ಅಣ್ಣಿಗೇರಿ ಮತ್ತು ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಅಕ್ಕನ ಅರಿವು, ಬಸವಾದಿ ಶರಣರ ಚಿಂತನ ಕೂಟಗಳು ಬಸವಾದಿ ಶರಣರ ಹಿಂದೂ ಸಮಾವೇಶವನ್ನು ಬಸವ ಕಲ್ಯಾಣದಲ್ಲಿ ನಿರ್ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

# ಮೋದಿ ಸರ್ಕಾರಕ್ಕೆ 12 ವರ್ಷ: ಹೆಚ್ ಡಿ ಕೋಟೆಯಲ್ಲಿ ಬಿಜೆಪಿ ವಿಶೇಷ ಪೂಜೆ



**ಉದಯರಶ್ಮಿ ದಿನಪತ್ರಿಕೆ**

ಎಚ್ ಡಿ ಕೋಟೆ: ನರೇಂದ್ರಮೋದಿ ಅವರು ದೇಶದಲ್ಲಿ ಸುದೀರ್ಘ ಅವಧಿಗೆ ಪ್ರಧಾನಿಯಾಗಿ ಹೊಸ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ಹೆಚ್ ಡಿ ಕೋಟೆಯಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ದೇಶದ ಪ್ರಧಾನ ಮಂತ್ರಿಗಳಾಗಿ 12 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಹಾಗೂ ದೇಶದ ಇತಿಹಾಸದಲ್ಲಿ ಅತ್ಯಧಿಕ ಅವಧಿಯವರೆಗೆ ಪ್ರಧಾನ ಮಂತ್ರಿ ಹುದ್ದೆಯನ್ನು ಅಲಂಕರಿಸಿದ ನಾಯಕರಲ್ಲಿ ಒಬ್ಬರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಮತ್ತು ಕಾರ್ಯ ಸಾಮರ್ಥ್ಯ ದೊರೆಯಲಿ ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಮೇಟಿಕುಪ್ಪೆ ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನದಲ್ಲಿ ಪ್ರಧಾನಿ ಮೋದಿ ಹೆಸರಲಿ ವಿಶೇಷ ಪೂಜೆ, ಅರ್ಚನ ಮಾಡಿಸಿ, ಭಕ್ತರಿಗೆ ಪ್ರಸಾದ ವಿತರಿಸಿದರು. ನಂತರ ದೇವಸ್ಥಾನದ ಆವರಣದಲ್ಲಿ ಸ್ವಚ್ಛತಾ ಅಭಿಯಾನ ಕೈಗೊಂಡು ಸ್ವಚ್ಛತೆ ಮತ್ತು ಗಿಡ ನೆಟ್ಟು ನೀರೆರೆಯುವ ಮೂಲಕ ಪರಿಸರ ಸಂರಕ್ಷಣೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸಿಕೆ ಗಿರೀಶ್, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಹೊಸ ಗುರುತನ್ನು ಪಡೆದಿದೆ. ಅಭಿವೃದ್ಧಿ, ಆರ್ಥಿಕ ಪ್ರಗತಿ, ರಾಷ್ಟ್ರೀಯ ಭದ್ರತೆ ಹಾಗೂ ಸಾಮಾಜಿಕ ಕಲ್ಯಾಣ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆಗಳು ನಡೆದಿದ್ದು, ವಿಶ್ವದ ರಾಷ್ಟಗಳು ಭಾರತದತ್ತ ಗೌರವದಿಂದ ನೋಡುವಂತಾಗಿದೆ ಎಂದು ಬಣ್ಣಿಸಿದರು.

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ, ಟಿ ವೆಂಕಟೇಶ್ ಮಾತನಾಡಿದರು.

ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ ಹಾಗೂ ರಾಜು, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಟಿ ವೆಂಕಟೇಶ್, ಸೈಯದ್ ಅಕ್ರಮ್ಮೊ ಪಾಷಾ, ಮೊತ್ತ ಬಸವರಾಜಪ್ಪ, ಮಾದಾಪುರ ನಂದೀಶ್, ಕುಮಾರ್, ರೂಪೇಶ್, ಸೋಮಾಚಾರ, ಕೆಂಡಗಣ್ಣ ಸ್ವಾಮಿ, ಗುರುಸ್ವಾಮಿ, ರಾಮಚಂದ್ರಣ್ಣ, ಯುವ ಮೋರ್ಚಾ ಅಧ್ಯಕ್ಷ ಪೃಥ್ವಿ ಕುಮಾರ್, ಮಧ್ಯಪ್ರಕಾಶ್, ವಿವೇಕಾನಂದ ಚಂದ್ರಮೌಳೇಶ್ವರ, ಮಹದೇವಪ್ಪ, ಸುರೇಶ್ ಶ್ರೀರಾಮುಲು, ಸೋಮಾಚಾರ್, ಶಿವಣ್ಣ ಮಹಾದೇವ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಭಾಗವಹಿಸಿದರು.

# ಕೋರವಾರ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಸಮವಸ್ತ್ರ ವಿತರಣೆ

**ಉದಯರಶ್ಮಿ ದಿನಪತ್ರಿಕೆ**



ದೇವರಹಿಪ್ಪರಗಿ: ಇಂದು ಅಂಗನವಾಡಿ ಕೇಂದ್ರಗಳು ಶಾಲಾಪೂರ್ವ ಶಿಕ್ಷಣದ ಸಮಗ್ರ ಅನುಷ್ಠಾನದ ಪ್ರತಿಫಲವಾಗಿ ಮಾದರಿ ಅಂಗನವಾಡಿಗಳಾಗಿವೆ ಎಂದು ಸಿಂದಗಿ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎ.ಕೆ. ಹಳ್ಳಿ ಹೇಳಿದರು.

ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಬುಧವಾರ ಅಂಗನವಾಡಿ ಸಂಖ್ಯೆ 07ರಲ್ಲಿ ಮಕ್ಕಳಿಗೆ ಶಾಲಾ ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಮ್ಮ ಕೇಂದ್ರಗಳು ಯಾವುದೇ ಖಾಸಗಿ ಶಾಲೆಗಳಿಗಿಂತ ಕಡಿಮೆ ಇಲ್ಲ. ಇಂದು ಸರ್ಕಾರದ ಹಲವಾರು ಯೋಜನೆಗಳು ಮಕ್ಕಳಿಗಾಗಿ ಇವೆ. ಈ ಕೇಂದ್ರಗಳಿಗೆ ದಾನಿಗಳು ಹಾಗೂ ಗ್ರಾಮ ಪಂಚಾಯಿತಿ ಸಹಕಾರ ತುಂಬಾ ಇದೆ. ಇಲ್ಲಿ ಪಾಲಕರ ಆಸಕ್ತಿಯಂತೆ ಕನ್ನಡ, ಇಂಗ್ಲಿಷ್ ಕಲಿಕೆ ನಡೆಯುತ್ತಿದೆ. ಇದರ ಸದುಪಯೋಗವನ್ನು ಎಲ್ಲಾ ಪಾಲಕರು ಪಡೆದುಕೊಳ್ಳಬೇಕು. ಗ್ರಾಮದ ಎಲ್ಲಾ ಅಂಗನವಾಡಿಗಳು ಉತ್ತಮ ಕಾರ್ಯ ನಿರ್ವಹಣೆಯಲ್ಲಿ ತೊಡಗಿವೆ. ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ನೇಹ ಸಂಸ್ಥೆಯಿಂದ ಏಳು ಹಂತದ ಶಾಲಾ ಪೂರ್ವ ಶಿಕ್ಷಣದ ತರಬೇತಿ ನೀಡಲಾಗುತ್ತಿದ್ದು, ಇದರಿಂದ ಎಲ್ಲಾ ಅಂಗನವಾಡಿಗಳು ಮಾದರಿ ಕೇಂದ್ರಗಳಾಗಿವೆ. ಇದೇ ರೀತಿಯ ಸಹಕಾರ ನಮ್ಮ ಅಂಗನವಾಡಿ ಕೇಂದ್ರಗಳಿಗೆ ಇರಲಿ ಎಂದರು.

ಅಂಗನವಾಡಿಯ ಮೇಲ್ವಿಚಾರಕಿ ಎಸ.ಎಚ್.ಕಾಗಲ್ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಯಾಗುತ್ತದೆ ಎಂದು ತಿಳಿಸಿ ಶಾಲಾ ಪೂರ್ವ ಶಿಕ್ಷಣ ಮಹತ್ವ ವಿವರಿಸಿದರು.

ಸ್ನೇಹ ಸಂಸ್ಥೆಯ ಸಂಯೋಜಕ ಸಾಗರ ಘಾಟಗೆ, ಕೇಂದ್ರದ ಶಿಕ್ಷಕಿ ಪ್ರೇಮಾ ಕುಳೆಕುಮಟಗಿ ಮಾತನಾಡಿದರು.

ನಂತರ ದಾನಿ ರಾಮನಗೌಡ ಬೋರಾವತ್ ಎಲ್ಲಾ ಮಕ್ಕಳಿಗೆ ಸಮವಸ್ತ್ರ ವಿತರಿಸಿದರು.

ಅಂಗನವಾಡಿ ಶಿಕ್ಷಕಿಯರಾದ ಎಸ್.ಐ.ಮರತೂರ್, ಜೆ.ಬಿ.ಮಠಪತಿ, ರೇಷ್ಮಾ ಟಕ್ಕಳಕಿ ಸ್ನೇಹ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಗೌಡಪ್ಪ ಬಿರಾದಾರ, ಗ್ರಾಮ ಪಂಚಾಯಿತಿ ಸದಸ್ಯ ರಾಜಶೇಖರ ಛಾಯಾಗೋಳ, ಅಪ್ಪುಗೌಡ ಪೊಲೀಸ್ ಪಾಟೀಲ್, ಮುಖ್ಯ ಶಿಕ್ಷಕ ಪಿ.ಎಸ್. ಜಾಲವಾದಿ, ಆರೋಗ್ಯ ಇಲಾಖೆಯ ಎಂ.ಎಸ್.ಬಾಗೇವಾಡಿ ಹಾಗೂ ಎಲ್ಲಾ ಅಂಗನವಾಡಿ ಸಹಾಯಕಿಯರು ಪಾಲಕರು ಇದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR